ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 214 RNI Number : KNKAN/25/A2770 14-08-2026 Friday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :214 ರಾಯಚೂರು 14-08-2026 ಶುಕ್ರವಾರ ಪುಟ 04 ಬೆಲೆ ರೂ.2/- ಮೊ:8660146563

ಮೊದಲ ದಿನವೇ ವಿಧಾನಸಭೆಯಲ್ಲಿ ಆಡಳಿತ- ವಿಪಕ್ಷಗಳ ನಡುವೆ ಸಣ್ಣ ಮಟ್ಟಿನ ಚರ್ಚೆ

ಬೆಂಗಳೂರು, ಆ.13-

ವಿಧಾನಮಂಡಲದ ಅಧಿವೇಶನದ ಮೊದಲ ದಿನವೇ ಸಂತಾಪ ಸೂಚನೆ ಹಾಗೂ ನೂತನ ಸಚಿವರ ಪರಿಚಯ ವಿಚಾರವಾಗಿ ಆಡಳಿತ ಮತ್ತು ಪ್ರತಿಪಕ್ಷದ ನಡುವೆ ಸಣ್ಣ ಮಟ್ಟಿನ ಚರ್ಚೆ ನಡೆಯಿತು.

ಸಂತಾಪ ಸೂಚನೆಯ ಗಂಭೀರ ಸಂದರ್ಭವನ್ನು ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿರುವವರ ಸಂಭ್ರಮದೊಂದಿಗೆ ಮಿಶ್ರಣ ಮಾಡಬಾರದು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅಭಿಪ್ರಾಯಪಟ್ಟಿದ್ದು, ಇದಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹಮತ ವ್ಯಕ್ತಪಡಿಸಿದರು.

ವಿಧಾನಮಂಡಲದ ಅಧಿವೇಶನ ರಾಷ್ಟ್ರಗೀತೆ ವಂದೇ ಮಾತರಂ ಗಾಯನದೊಂದಿಗೆ ಆರಂಭವಾಯಿತು. ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಸಂಪುಟಕ್ಕೆ ಸೇರ್ಪಡೆಯಾದ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಲು ಮುಂದಾದರು.

ಈ ವೇಳೆ ಎದ್ದು ನಿಂತ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸದನದಲ್ಲಿ ಸಂತಾಪ ಸೂಚನೆ ನಡೆಯಬೇಕಿದೆ. ಸಚಿವರಾಗಿ ಅಧಿಕಾರ ಸ್ವೀಕರಿಸಿರುವವರಿಗೆ ಇದು ಸಂಭ್ರಮದ ವಿಚಾರ. ಹೀಗಾಗಿ ಸಂತಾಪ ಸೂಚನೆಯ ಗಂಭೀರ ಸಂದರ್ಭದ ಜೊತೆಗೆ ನೂತನ ಸಚಿವರ ಪರಿಚಯದ ಸಂಭ್ರಮವನ್ನು ಮಿಶ್ರಣ ಮಾಡುವ ಹೊಸ ಸಂಪ್ರದಾಯ ಬೇಡ ಎಂದು ಹೇಳಿದರು.

ಅಧಿವೇಶನದ ಅಧಿಕೃತ ಕಾರ್ಯಕಲಾಪಗಳು ಸೋಮವಾರದಿಂದ ಆರಂಭವಾಗಲಿದ್ದು, ಅಂದೇ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಬಹುದು ಎಂದು ಆರ್. ಅಶೋಕ್ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಭಾಧ್ಯಕ್ಷರ ಪೀಠದಲ್ಲಿದ್ದ ಹಂಗಾಮಿ ಸಭಾಧ್ಯಕ್ಷ ಟಿ.ಬಿ. ಜಯಚಂದ್ರ ಅವರು ಮಧ್ಯಪ್ರವೇಶಿಸಿ, ಸಂತಾಪ ಸೂಚನಾ ನಿರ್ಣಯ ಇನ್ನೂ ಮಂಡನೆಯಾಗಿಲ್ಲ. ಆದ್ದರಿಂದ ಮುಖ್ಯಮಂತ್ರಿ ಅವರು ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಬಹುದು ಎಂದು ಅಭಿಪ್ರಾಯಪಟ್ಟರು.

ಕಲಾಪ ಆರಂಭವಾದ ಸಂದರ್ಭದಲ್ಲಿ ಹೊಸದಾಗಿ ಸಚಿವರಾಗಿ ನೇಮಕಗೊಂಡವರನ್ನು ಸದನಕ್ಕೆ ಪರಿಚಯಿಸುವುದು ಸಂಪ್ರದಾಯವಾಗಿದೆ. ಇದಕ್ಕೆ ನಿಯಮಗಳಲ್ಲಿಯೂ ಅವಕಾಶವಿದೆ ಎಂದು ಜಯಚಂದ್ರ ತಿಳಿಸಿದರು.ಆದರೂ ಆರ್. ಅಶೋಕ್ ಅವರು ತಮ ನಿಲುವಿಗೆ ಬದ್ಧರಾಗಿದ್ದರು. ಸಂತಾಪ ಸೂಚನೆಯ ಸಂದರ್ಭವನ್ನು ಗೌರವಿಸುವುದು ಮುಖ್ಯವಾಗಿದ್ದು, ಸಚಿವರ ಪರಿಚಯವನ್ನು ನಂತರ ನಡೆಸುವುದು ಸೂಕ್ತ ಎಂದು ಪುನರುಚ್ಚರಿಸಿದರು.ಫ ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ಭಾವನೆಗಳಿಗೆ ತಮ ಬೆಂಬಲವಿದೆ ಎಂದು ಹೇಳಿದರು.

ಮೊದಲು ಸಂತಾಪ ಸೂಚನೆ ನಡೆಯಲಿ. ಬಳಿಕ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸುತ್ತೇನೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ಮುಖ್ಯಮಂತ್ರಿಯವರ ಸಹಮತದ ಬಳಿಕ ಹಂಗಾಮಿ ಸಭಾಧ್ಯಕ್ಷ ಟಿ.ವಿ. ಜಯಚಂದ್ರ ಅವರು ಸಂತಾಪ ಸೂಚನಾ ನಿರ್ಣಯವನ್ನು ಕೈಗೆತ್ತಿಕೊಂಡರು. ಹೀಗಾಗಿ ನೂತನ ಸಚಿವರ ಪರಿಚಯವನ್ನು ಮುಂದೂಡಲಾಯಿತು.



ಕೃಷಿ ವಿವಿಗೆ ಸ್ಥಾನ ನೀಡದಿದ್ದರೆ 24 ತಾಸು ಉಪವಾಸ ಸಿ ಮತ್ತು ಆರ್ ಸಮಿತಿಯಿಂದ ರಾಯಚೂರು ಕೃಷಿ ವಿವಿ ಕುಲಪತಿ ಹೊರಕ್ಕೆ ವಿದ್ಯಾರ್ಥಿಗಳ ಆಕ್ರೋಶ



ರಾಯಚೂರು, ಆ.13-

ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದ ಸಿ ಮತ್ತು ಆರ್ ನಿಯಮಾವಳಿಯಲ್ಲಿರುವ ಅವೈಜ್ಞಾನಿಕ ಅಂಶಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಕೃಷಿ ವಿದ್ಯಾರ್ಥಿಗಳು ನಡೆಸಿದ 25 ದಿನಗಳ ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಸೂಚನೆಯನ್ನು ಹಿಂಪಡೆದು ತಜ್ಞರ ಸಲಹಾ ಸಮಿತಿ ರಚಿಸಿದೆ. ಆದರೆ ಈ ಸಮಿತಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಅವಕಾಶ ನೀಡದಿರುವುದು ಅನ್ಯಾಯವಾಗಿದೆ ಎಂದು ಕರ್ನಾಟಕ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಕೆ. ರಾಜೇಶ್ ಕುಮಾರ್ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಇಲಾಖೆಯು ಆ.7ರಂದು ಹೊರಡಿಸಿರುವ ಆದೇಶದಂತೆ ರಚಿಸಿರುವ ಸಮಿತಿಯಲ್ಲಿ ಬೆಂಗಳೂರು ಮತ್ತು

3 ನೇ ಪುಟಕ್ಕೆ

ಶಿಕ್ಷಕಿಗೆ ಜಾತಿ ನಿಂದನೆ. ಬಿಇಓಗೆ ದೂರು;



ರಾಯಚೂರು, ಆ.13-

ನಗರದ ಸಿಯಾತಲಾಬ್ ಬಡಾವಣೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿಯೊಬ್ಬರಿಗೆ ಜಾತಿ ನಿಂದನೆ ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಆರೋಪ ಕೇಳಿಬಂದಿದೆ.

ಶಾಲೆಯ ಸಹ ಶಿಕ್ಷಕಿ ಅರುಣಾ ಅವರು, ಇದೇ ಶಾಲೆಯ ಶಿಕ್ಷಕಿ ಜ್ಯೋತಿಲಕ್ಷ್ಮಿ ಅವರು ತಮ್ಮೊಂದಿಗೆ ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ಮಕ್ಕಳಿಗೆ ಪಾಠ ಬೋಧಿಸುತ್ತಿದ್ದ ಸಂದರ್ಭದಲ್ಲಿ ತರಗತಿಗೆ ಬಂದ ಜ್ಯೋತಿಲಕ್ಷ್ಮಿ, ತಾವು ಹೇಳಿದ ತರಗತಿಯನ್ನು ತೆಗೆದುಕೊಳ್ಳಬೇಕು ಎಂದು ಬೈದು, ವಿದ್ಯಾರ್ಥಿಗಳ ಎದುರೇ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಇದರಿಂದ ತಾವು ತೀವ್ರವಾಗಿ ಮಾನಸಿಕವಾಗಿ ನೊಂದಿರುವುದಾಗಿ ಅರುಣಾ ಅವರು ಬಿಇಓಗೆ ಸಲ್ಲಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಘಟನೆಗೆ ಕಾರಣರಾದ ಶಿಕ್ಷಕಿಯ ವಿರುದ್ಧ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಿಕ್ಷಣಾಧಿಕಾರಿಗಳು, ''ಸಣ್ಣಪುಟ್ಟ ವಿಚಾರಕ್ಕೆ ಶಿಕ್ಷಕರ ನಡುವೆ ಜಗಳ ನಡೆದಿದೆ. ಘಟನೆಯ ಸತ್ಯಾಸತ್ಯತೆ ತಿಳಿಯಲು ಸಂಯೋಜನಾಧಿಕಾರಿ ಮಲ್ಲಿಕಾರ್ಜುನ ಅವರಿಗೆ ಜವಾಬ್ದಾರಿ ನೀಡಲಾಗಿದೆ. ತನಿಖೆ ನಡೆಸಿ ವರದಿ ಪಡೆದ ಬಳಿಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು'' ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರವು ಮುಸ್ಲಿಮರ ವಕ್ಫ್ ಆಸ್ತಿಗಳನ್ನು ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ- ಮೊಹಮ್ಮದ್ ಇಬ್ರಾಹಿಂ ಆರೋಪ



ರಾಯಚೂರು,ಆ.13-

ಭಾರತದಲ್ಲಿ ಕರ್ನಾಟಕವು ವಕ್ಫ್ ಆಸ್ತಿಗಳ ವಿಷಯದಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇಲ್ಲಿ ಮುಸ್ಲಿಮರಿಗೆ ಸೇರಿದ ವಕ್ಫ್ ಆಸ್ತಿಗಳು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿವೆ.

ಭಾರತ ಸ್ವಾತಂತ್ರ್ಯ ನಂತರದಿಂದ ಇಲ್ಲಿಯವರೆಗೆ ವಕ್ಫ್ ಆಸ್ತಿಗಳನ್ನು ರಕ್ಷಿಸಲು ಸರ್ಕಾರದ ಪರವಾಗಿ ಜಮೀರ್ ಅಹ್ಮದ್ ಸಾಹೇಬರಂತೆ ಯಾವುದೇ ಕ್ರಮವನ್ನು ಯಾವುದೇ ಸರ್ಕಾರ ಕೈಗೊಂಡಿಲ್ಲ. ಅಂತಹ ಜಮೀರ ಅಹ್ಮದ್ ಅವರನ್ನು ಕಾಂಗ್ರೆಸ್ ಸರ್ಕಾರವು ವಕ್ಫ್ ಸಚಿವ ಸ್ಥಾನ ಕಿತ್ತುಕೊಂಡು ವಾಸ್ತವವಾಗಿ ಎಲ್ಲಾ ಮುಸ್ಲಿಮರ ವಕ್ಫ್ ಆಸ್ತಿಗಳನ್ನು ನಾಶ ಮಾಡಲು ಮುಂದಾಗಿದೆ. ಈ ಸರ್ಕಾರವು ಮುಸ್ಲಿಮರ ಆಸ್ತಿಗಳು ಸಂರಕ್ಷಿತವಾಗಿರಬೇಕೆಂದು ಬಯಸುವುದಿಲ್ಲ.

ಭಾರತ ಸ್ವಾತಂತ್ರ್ಯ ನಂತರ ಈವರೆಗೆ ಎಷ್ಟು ವಕ್ಫ್ ಸಚಿವರು ಬಂದಿದ್ದಾರೆ. ಅವರೆಲ್ಲರಲ್ಲಿ ವಕ್ಫ್ ಆಸ್ತಿಗಳಿಗೆ ಅತೀ ಹೆಚ್ಚು ಕೊಡುಗೆಯನ್ನು ನೀಡಿದ ಸಚಿವರು ಯಾರಾದರೂ ಇದ್ದರೆ, ಅದು

3 ನೇ ಪುಟಕ್ಕೆ

ಭೂಮಾನಂದ ಹತ್ಯೆ ಖಂಡಿಸಿ ಆ.23ರಿಂದ ಬೃಹತ್ ಹೋರಾಟ ರಾಯಚೂರು ಜಿಲ್ಲೆ ದಲಿತರನ್ನು ಕೊಲೆ ಮಾಡುವ ವೆಬ್ ಆಗಿದೆ -ರವೀಂದ್ರನಾಥ ಪಟ್ಟಿ



ರಾಯಚೂರು, ಆ.13-

ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ಭೂಮಾನಂದ ಅವರ ಹತ್ಯೆ ಪ್ರಕರಣವನ್ನು ಖಂಡಿಸಿ, ಪ್ರಮುಖ ಆರೋಪಿಗಳನ್ನು ಕೂಡಲೇ ಬಂಧಿಸಬೇಕು, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಹತ್ಯೆ ಪ್ರಕರಣದ ಸಂಪೂರ್ಣ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಆ.23ರಿಂದ ಬೃಹತ್ ಹೋರಾಟ ನಡೆಸಲಾಗುವುದು ಎಂದು ಬಹುಜನ ಮುಖಂಡ ಹಾಗೂ ಭೂಮಾನಂದ ಕಗ್ಗೊಲೆ ವಿರೋಧಿ ಒಕ್ಕೂಟದ ಮುಖಂ ಡ ಎಸ್. ಮಾರೆಪ್ಪ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೂಮಾನಂದ ಅವರ ಹತ್ಯೆ ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಹ ಘಟನೆ. ಆದರೆ ಹತ್ಯೆಗೀಡಾದ ಕುಟುಂಬದ ಪರ ನಿಲ್ಲಬೇಕಾದ ಸಂಘ-ಸಂಸ್ಥೆಗಳ ಬದಲಿಗೆ ಕೆಲವರು ಆರೋಪಿಗಳ ಕುಟುಂಬದ ಪರ ನಿಂತಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೈದ್ರಾಬಾದ್ ಕರ್ನಾಟಕ ವಾಲ್ಮೀಕಿ ನಾಯಕ ಸಂಘದ ಪದಾಧಿಕಾರಿಗಳು ಹತ್ಯೆಯ ಬಗ್ಗೆ ಕನಿಷ್ಠ ಅನುಕಂಪವನ್ನೂ ವ್ಯಕ್ತಪಡಿಸದೆ ಆರೋಪಿಗಳ ಕುಟುಂಬದ ಪರ ನಿಂತಿರುವುದು ನೈತಿಕ ದಿವಾಳಿತನ ಮತ್ತು ಸ್ವಜಾತಿ ಪಕ್ಷಪಾತವನ್ನು ತೋರಿಸುತ್ತದೆ ಎಂದು ಆರೋಪಿಸಿದ ಅವರು, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಸಾಮಾಜಿಕ ನ್ಯಾಯ ಕಾಪಾಡುವ ಜವಾಬ್ದಾರಿ ಎಲ್ಲ ಸಮುದಾಯಗಳ ಮುಖಂಡರು ಮತ್ತು ಸಂಘಟನೆಗಳ ಮೇಲಿದೆ ಎಂದರು.

ಭೂಮಾನಂದ ಹಾಗೂ ಅವರ ಕುಟುಂಬದ ಪರವಾಗಿ ದಲಿತ ಸಂಘಟನೆಗಳು ನಿಲ್ಲಲಿದ್ದು, ನ್ಯಾಯ ಮತ್ತು ಸತ್ಯಕ್ಕಾಗಿ ಹೋರಾಟ ಮುಂದುವರಿಸಲಾಗುವುದು. ಆರೋಪಿಗಳ ಪರ ನಿಲ್ಲುವವರ ನಿಲುವನ್ನು ಜನರ ಮುಂದೆ ಬಹಿರಂಗಪಡಿಸಲಾಗುವುದು ಎಂದು ಎಚ್ಚರಿಸಿದರು. ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದ ಹಾಲಿ ಹಾಗೂ ಮಾಜಿ ಜನಪ್ರತಿನಿಧಿಗಳು ಪ್ರಕರಣದ ಕುರಿತು ಮೌನ ವಹಿಸಿರುವುದನ್ನೂ ಖಂಡಿಸಿದರು.

ಹತ್ಯೆ ಪ್ರಕರಣದಲ್ಲಿ ದೇವಪ್ಪ ಅಲಿಯಾಸ್ ದೇವರಾಜ ಅವರ ಹಿರಿಯ ಸಹೋದರ ಭೀಮರಾಯ ಹದ್ದಿನಾಳ ಅವರು ಪ್ರಮುಖ ಪಾತ್ರ ವಹಿಸಿದ್ದಾರೆಂದು ಆರೋಪಿಸಿದ

3 ನೇ ಪುಟಕ್ಕೆ

ಕೊಲೆ ಪ್ರಕರಣದಲ್ಲಿ ಭೀಮರಾಯ ಹದ್ದಿನಾಳ ಹೆಸರನ್ನು ಕೈಬಿಡಲು ವಾಲ್ಮೀಕಿ ನಾಯಕ ಮಹಾಸಭಾ ಒತ್ತಾಯ



ಸಿರವಾರ ಆ.13-

ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಗ್ರಾಮದಲ್ಲಿ ನಡೆದ ಯುವಕನ ಕೊಲೆ ಪ್ರಕರಣದಲ್ಲಿ ಸಂಪಾದಕರು ಪತ್ರಕರ್ತರಾದ ಭೀಮರಾಯ ಹದ್ದಿನಾಳ ಅವರ ಹೆಸರನ್ನು ದುರಿದೇಶದಿಂದ ಸೇರಿಸಲಾಗಿದ್ದೂ, ಎಫ್‌ಐಆರ್‌ನಿಂದ ಅವರ ಹೆಸರನ್ನು ಕೈಬಿಡುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ (ರಿ) ವತಿಯಿಂದ ತಹಶೀಲ್ದಾರರ ಮೂಲಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಪ್ರಕರಣ ಸಂಖ್ಯೆ 104/2026ಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಮನವಿಯಲ್ಲಿ ಸುಂಕೇಶ್ವರಹಾಳ ಗ್ರಾಮದಲ್ಲಿ ನಡೆದ ಯುವಕನ ಕೊಲೆ ಪ್ರಕರಣವನ್ನು ಸಂಘವು ಖಂಡಿಸಿದ್ದು, ನೊಂದ ಕುಟುಂಬದೊಂದಿಗೆ ಸಮಾಜವೂ ಇದೆ ಎಂದು ತಿಳಿಸಲಾಗಿದೆ. ಪೊಲೀಸ್ ತನಿಖೆಯಲ್ಲಿ ಪ್ರಮುಖ ಆರೋಪಿತರ ಕುರಿತು ಮಾಹಿತಿ ಲಭ್ಯವಾಗಿದ್ದು, ಅವರನ್ನು ಬಂಧಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು. ಆದರೆ ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲದ ಇನ್ನೂ ಕೆಲವರನ್ನು ಆರೋಪಿಗಳ ಪಟ್ಟಿಗೆ ಸೇರಿಸಿರುವುದು ಖಂಡನೀಯ,.

ಪ್ರಕರಣದ ಆರೋಪಿತರ

3 ನೇ ಪುಟಕ್ಕೆ

ಬಿ. ನಾಗೇಂದ್ರ, ರಾಜೀನಾಮೆ ಪಡೆಯದಿದ್ದರೆ ರಾಜ್ಯಾದ್ಯಂತ ಹೋರಾಟ-ವೀರನಗೌಡ ಲೆಕ್ಕಿಹಾಳ



ರಾಯಚೂರು, ಆ.13-

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಅವ್ಯವಹಾರ ಪ್ರಕರಣದ ತನಿಖೆ ಪೂರ್ಣಗೊಳ್ಳುವ ಮುನ್ನವೇ ಬಿ. ನಾಗೇಂದ್ರ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿರುವುದನ್ನು ಖಂಡಿಸಿರುವ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಕೂಡಲೇ ಅವರ ರಾಜೀನಾಮೆ ಪಡೆಯಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಪಂಗಡದ ಜನರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ನಿಗಮದ ಸುಮಾರು ₹187 ಕೋಟಿ ಹಣದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ನಾಗೇಂದ್ರ ಅವರು ಹಿಂದೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಪ್ರಕರಣದ ತನಿಖೆ ಹಾಗೂ ಕಾನೂನು ಪ್ರಕ್ರಿಯೆಗಳು ಮುಂದುವರಿದಿರುವಾಗಲೇ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿರುವುದು ಸರ್ಕಾರದ ನಿಲುವಿನ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದರು.

ಹಗರಣದ ಗಂಭೀರತೆಯನ್ನು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಒಪ್ಪಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಪಟ್ಟಿ ಸಲ್ಲಿಕೆಯಾಗಿದ್ದು, ನಾಗೇಂದ್ರ ಅವರಿಗೆ ಸಂಪೂರ್ಣ ಕ್ಲೀನ್‌ಚಿಟ್ ದೊರೆತಿಲ್ಲ. ಇಂತಹ ಸಂದರ್ಭದಲ್ಲಿ ಅವರನ್ನು ಮತ್ತೆ ಸಚಿವರನ್ನಾಗಿ ಮಾಡುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದರು.

ನಿಗಮದ ಹಣವನ್ನು ಅಕ್ರಮವಾಗಿ ವರ್ಗಾಯಿಸಿ ತೆಲಂಗಾಣದಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಹಣ ಡ್ರಾ ಮಾಡಲಾಗಿದೆ ಎಂಬ ಆರೋಪಗಳಿದ್ದು, ಈ ಕುರಿತು ಜಾರಿ ನಿರ್ದೇಶನಾಲಯದ ದಾಖಲೆಗಳಲ್ಲೂ ಉಲ್ಲೇಖಗಳಿವೆ. ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿರುವುದೂ ಪ್ರಕರಣದ ಗಂಭೀರತೆಯನ್ನು ಹೆಚ್ಚಿಸಿದೆ ಎಂದು ಹೇಳಿದರು.

3 ನೇ ಪುಟಕ್ಕೆ

ಮಾನವ ಬಂಧುತ್ವ ವೇದಿಕೆ ಬಸವ ಪಂಚಮಿ ಆಚರಣೆ ಯುವ ಜನತೆ ಅಜ್ಞಾನ ತೊಡೆದು ಹಾಕಿ -ಟಿ.ಬಸವರಾಜ



ಸಿರವಾರ, ಆ.13-

12 ನೇ ಶತಮಾನದಲ್ಲಿಯೇ ಬಸವಣ್ಣನವರು ಮೌಢ್ಯತೆ, ಅಜ್ಞಾನದ ವಿರುದ್ಧ ಹೋರಾಡಿದ್ದಾರೆ, ಈಗ ವಿಜ್ಞಾನ ಬೆಳೆದಿದೆ ಯುವ ಜನತೆ ಮೌಢ್ಯತೆ, ಅಜ್ಞಾನ ಬಗ್ಗೆ ತಿಳಿದು ದೇಶದಿಂದ ಅನಿಷ್ಠ ಪದ್ದತಿಯನ್ನು ಹೋಗಲಾಡಿಸಬೇಕು ಎಂದು ವಿ.ಆರ್.ಎಸ್ ಶಾಲೆಯ ಅಧ್ಯಕ್ಷರಾದ ಟಿ. ಬಸವರಾಜ ಹೇಳಿದರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುನಲ್ಲಿ ಮಾನವ ಬಂಧುತ್ವ ವೇದಿಕೆ ತಾಲೂಕ ಸಮಿತಿಯಿಂದ ಹಮ್ಮಿಕೊಂಡಿದ ಬಸವ ಪಂಚಮಿಯನ್ನು ಉದ್ಘಾಟಿಸಿ ಮಾತನಾಡಿ ಅವರು ಇಂದಿನ ಯುವ ಜನತೆ ಸಮಾಜ ಪ್ರತಿಯೊಂದನ್ನು ಕೂಡಾ ಪ್ರಶ್ನೆ ಮಾಡದೇ ಯಾವುದನ್ನೂ ಒಪ್ಪಿಕೊಳ್ಳಬಾರದು.

ಮಾನವ ಚಂದ್ರ ಮಂಡಲಕ್ಕೆ ಹೋಗುವಷ್ಟು ವಿಜ್ಞಾನ ಬೆಳೆದಿದೆ ಆದರೂ ನಮ್ಮಲ್ಲಿ ಅಜ್ಞಾನ ಇನ್ನೂ ಬಿಡ್ತಿಲ್ಲ 12ನೇ ಶತಮಾನದ ಚಳುವಳಿ ಈ ದೇಶದ ಪುನರಜ್ಜೀವನ ಚಳುವಳಿಯಾಗಿದೆ. ಜೊತೆಗೆ ಪ್ರಯೊಬ್ಬರಲ್ಲಿಯೂ ವೈಚಾರಿಕ ವಿಚಾರಗಳನ್ನು ಬೆಳೆಸುವ ನಿಟ್ಟನಲ್ಲಿ ಪ್ರಜ್ಞಾವಂತರು ಇಂತಹ ಮೌಢ್ಯ ವಿರೋಧಿ ಕಾರ್ಯಕ್ರಮವನ್ನು ಹೆಚ್ಚೇಚ್ಚು ಆಯೋಜಿಸವಂತಗಲಿ ಎಂದು ಅಭಿಪ್ರಾಯ ಪಟ್ಟರು.

ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಹಾಜಿ ಚೌದ್ರಿ ಮಾತನಾಡಿ ಇಂದಿನ ಸಮಾಜದಲ್ಲಿ ಜಾತಿ ಧರ್ಮದ ಹೆಸರಿನಲ್ಲಿ ಯುವಕರನ್ನು ದಾರಿತಪ್ಪಿಸುವ ಕೆಲಸ ಕೆಲವು ಸಮಾಜ ದ್ರೋಹಿ ಸಂಘಗಳು ಮಾಡಿತಿವೆ. ಅದನ್ನ ಬಿಟ್ಟು

3 ನೇ ಪುಟಕ್ಕೆ

ಕೊಪ್ಪಳದಲ್ಲಿ ಮೂರು ದಿನಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಚಾಲನೆ

ಮಕ್ಕಳ ರಕ್ಷಣೆಯಲ್ಲಿ ಬೆಂಬಲ ವ್ಯಕ್ತಿಗಳ ಪಾತ್ರ ಮಹತ್ವದ್ದು: ನ್ಯಾ. ಮಧು ಎನ್.ಆರ್.



ಕೊಪ್ಪಳ ಆ.12

ಮಕ್ಕಳ ರಕ್ಷಣೆಯಲ್ಲಿ ಬೆಂಬಲ ವ್ಯಕ್ತಿಗಳ ಪಾತ್ರ ಮಹತ್ವದ್ದಾಗಿದೆ ಎಂದು ತ್ವರಿತಗತಿ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಮಧು ಎನ್.ಆರ್. ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಹಾಗೂ ಎನ್‌ಫೋಲ್ಡ್ ಟ್ರಸ್ಟ್, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ನಗರದ ಹೋಟೇಲ್ ಫಾರ್ಚೂನ್‌ನಲ್ಲಿ ಆಗಸ್ಟ್ 12 ರಿಂದ 14ರವರೆಗೆ ಹಮ್ಮಿಕೊಂಡಿದ್ದ ಬೆಂಬಲ ವ್ಯಕ್ತಿಗಳಿಗಾಗಿ ಮೂರು ದಿನಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ನಿಯಮಾವಳಿಗಳು-2020ರನ್ವಯ, ಲೈಂಗಿಕ ಅಪರಾಧಕ್ಕೆ ಒಳಗಾದ ಮಕ್ಕಳಿಗೆ ತನಿಖೆ ಹಾಗೂ ವಿಚಾರಣೆಯ ಸಂದರ್ಭದಲ್ಲಿ ಅಗತ್ಯ ನೆರವು ಒದಗಿಸುವವರು ಬೆಂಬಲ ವ್ಯಕ್ತಿಗಳಾಗಿರುತ್ತಾರೆ. ಮಕ್ಕಳ ದೈಹಿಕ, ಮಾನಸಿಕ ಹಾಗೂ ಆರೋಗ್ಯ ಸ್ಥಿತಿಗತಿ, ಶಿಕ್ಷಣದ ಪುನರಾರಂಭ, ಮುಂದುವರಿದ ಶಿಕ್ಷಣ ಅಥವಾ ಅಗತ್ಯವಿದ್ದಲ್ಲಿ ಶಾಲೆ ಬದಲಾವಣೆ ಕುರಿತು ಪ್ರತಿ ತಿಂಗಳು ಮಕ್ಕಳ ಕಲ್ಯಾಣ ಸಮಿತಿಗೆ ವರದಿ ಸಲ್ಲಿಸಬೇಕು. ಇದರಿಂದ ಮಗುವಿಗೆ ಅಗತ್ಯ ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಬಾಧಿತ ಮಗು ಅಥವಾ ಮಗುವಿನ ಪರವಾಗಿ ಮಧ್ಯಂತರ ಪರಿಹಾರಕ್ಕಾಗಿ ತ್ವರಿತಗತಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಈ ಕುರಿತು ಮಕ್ಕಳಿಗೆ ಸೂಕ್ತ ಮಾಹಿತಿ ನೀಡಬೇಕು. ಇದರಿಂದ ಯಾವುದೇ ಆಮಿಷ ಅಥವಾ ಆಸೆಗೆ ಒಳಗಾಗಿ ಮಕ್ಕಳು ತಮ್ಮ ಹೇಳಿಕೆಗಳನ್ನು ಬದಲಾಯಿಸುವುದನ್ನು ತಡೆಯಲು ಹಾಗೂ ಆರೋಪಿತರು ಶಿಕ್ಷೆಯಿಂದ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಳ್ಳಲು ಸಹಕಾರಿಯಾಗುತ್ತದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ದರಗದ ಅವರು ಮಾತನಾಡಿ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ನಿಯಮಾವಳಿಗಳು-2020 ದೇಶದಾದ್ಯಂತ ಜಾರಿಯಲ್ಲಿರುವ ಏಕರೂಪದ ನಿಯಮಾವಳಿಗಳಾಗಿವೆ. ಈ ನಿಯಮಾವಳಿಗಳ ಜೀವಾಳವೇ ಬೆಂಬಲ ವ್ಯಕ್ತಿಗಳು. ವಿಚಾರಣೆ ಪ್ರಕ್ರಿಯೆಯಲ್ಲಿ ಬಾಧಿತ ಮಗುವಿಗೆ ಮಾನಸಿಕ ಸ್ಥೈರ್ಯ, ಅಗತ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಿ ಮಗುವಿನ ಮನೋಬಲವನ್ನು ಹೆಚ್ಚಿಸುವಲ್ಲಿ ಬೆಂಬಲ ವ್ಯಕ್ತಿಗಳ ಪಾತ್ರ ಪ್ರಮುಖವಾಗಿದೆ ಎಂದು ಹೇಳಿದರು.

ನ್ಯಾಯಾಲಯದ ಆದೇಶದ ಅನುಸಾರ ಬಾಧಿತರಿಗೆ ಪರಿಹಾರವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ತುರ್ತಾಗಿ ವಿತರಿಸಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ ಅವರು ಮಾತನಾಡಿ, ನಿಯಮಾವಳಿಗಳನ್ವಯ ಬೆಂಬಲ ವ್ಯಕ್ತಿಗಳು ಬಾಧಿತ ಮಗು, ವಿವಿಧ ಇಲಾಖೆಗಳು ಹಾಗೂ ಸಮುದಾಯದ ನಡುವೆ ಸಮನ್ವಯಕಾರರಾಗಿ ಕಾರ್ಯನಿರ್ವಹಿಸುವುದು ಅತ್ಯವಶ್ಯಕವಾಗಿದೆ. ಮಗುವಿನ ಘನತೆಯನ್ನು ಕುಟುಂಬ ಮತ್ತು ಸಮುದಾಯದಲ್ಲಿ ಪುನರ್‌ಸ್ಥಾಪಿಸುವುದರೊಂದಿಗೆ, ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಪೂರಕವಾದ ವಾತಾವರಣ ನಿರ್ಮಿಸುವುದು ಬೆಂಬಲ ವ್ಯಕ್ತಿಗಳ ಪ್ರಮುಖ ಜವಾಬ್ದಾರಿಯಾಗಿದೆ. ಆದ್ದರಿಂದ ಎಲ್ಲರೂ ಸಕ್ರಿಯವಾಗಿ ಕಾರ್ಯನಿರ್ವಹಿಸಿ ಮಕ್ಕಳ ರಕ್ಷಣೆಯಲ್ಲಿ ಇಲಾಖೆಯೊಂದಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ದಿವ್ಯಾ ಜೋಗಿ, ಎನ್‌ಫೋಲ್ಡ್ ಟ್ರಸ್ಟ್‌ನ ಖುಷಿ ಕುಶಾಲಪ್ಪ ಹಾಗೂ ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆಯ ಹರೀಶ ಜೋಗಿ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ವಿವಿಧ ವಿಷಯಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ ಬೆಂಬಲ ವ್ಯಕ್ತಿಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಬಸಮ್ಮ ನಿರೂಪಿಸಿದರು. ಪ್ರತಿಭಾ ಪ್ರಾರ್ಥಿಸಿದರು. ಅಮರಮ್ಮ ಸ್ವಾಗತಿಸಿದರು. ರವಿಕುಮಾರ ಪವಾರ ವಂದಿಸಿದರು.

ಉದ್ಯಮ ಸ್ಥಾಪಿಸಿ ಆರ್ಥಿಕ ಸ್ವಾವಲಂಬಿಯಾಗಿ



ಬಳ್ಳಾರಿ,ಆ.12

ಸ್ವಂತ ಉದ್ಯಮ ಆರಂಭಿಸುವುದರಿಂದ ಆರ್ಥಿಕ ಸ್ವಾವಲಂಬನೆ ಸಾಧಿಸುವುದರ ಜೊತೆಗೆ ಇತರರಿಗೂ ಉದ್ಯೋಗಾವಕಾಶ ನೀಡಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ ಬಿ. ಅವರು ಅಭಿಪ್ರಾಯಪಟ್ಟರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ (ಸಿಡಾಕ್) ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿರುವ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮ'ವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯಮದಿಂದ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಬಹುದು. ಸರ್ಕಾರದ ವಿವಿಧ ಯೋಜನೆಗಳು, ಲಭ್ಯವಿರುವ ಸೌಲಭ್ಯಗಳು, ಬ್ಯಾಂಕಿಗ್ ನೆರವು ಹಾಗೂ ಸೂಕ್ತ ಹಣಕಾಸು ನಿರ್ವಹಣೆಯ ಅರಿವು ಪ್ರತಿಯೊಬ್ಬ ಉದ್ಯಮಿಗೂ ಅಗತ್ಯ ಎಂದು ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಬೆಂಗಳೂರಿನ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಲೆಕ್ಕಾಧಿಕಾರಿ ಪ್ರಕಾಶ ಹಳ್ಳಿಕಟ್ಟಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಉದ್ಯಮ ರಂಗದಲ್ಲಿ ಯಶಸ್ಸು ಗಳಿಸಲು ಸೂಕ್ತ ತರಬೇತಿ ಮತ್ತು ಉದ್ಯಮಶೀಲತೆಯ ಗುಣಲಕ್ಷಣಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅವಶ್ಯಕ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಬಿ.ಜಿ. ರಂಗನಾಥ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಲೆಕ್ಕಪರಿಶೋಧಕ ಟಿ.ಎಸ್. ಗಿರೀಶ್, ಎಫ್.ಡಿ.ಎ ಎನ್.ಎಮ್. ಕಾರ್ತಿಕ್, ಧಾರವಾಡದ ಸಂಪನ್ಮೂಲ ವ್ಯಕ್ತಿ ಜಗದೀಶ ಯಲಿಗಾರ, ಸಿಡಾಕ್ ತರಬೇತಿ ಅಧಿಕಾರಿ ವಿನೋದಕುಮಾರ ಕೆ., ಪುರುಷೋತ್ತಮ್ ಹಾಗೂ ತರಬೇತಿಯ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಸ್ವಾರ್ಥದಿಂದ ಸಹಬಾಳ್ವೆಯತ್ತ...

ಸಮಾಜದಲ್ಲಿ ಕೆಲವರು ತಮ್ಮ ಸಾಧನೆಗಿಂತಲೂ ಇತರರ ಸಾಧನೆಯನ್ನು ಗಮನಿಸುತ್ತಾ ಬದುಕುತ್ತಾರೆ. ಯಾರಾದರೂ ಒಳ್ಳೆಯ ಕೆಲಸ ಮಾಡಿದರೆ ಅಭಿನಂದಿಸುವ ಬದಲು ಹೊಟ್ಟೆಕಿಚ್ಚು ಪಡುತ್ತಾರೆ. ಯಾರಾದರೂ ಸಮಾಜದಲ್ಲಿ ಗೌರವ ಗಳಿಸಿದರೆ ಅದನ್ನು ಸಹಿಸಿಕೊಳ್ಳಲಾರರು. ತಮ್ಮ ದುರ್ಬಲತೆಗಳನ್ನು ಸರಿಪಡಿಸಿಕೊಳ್ಳುವ ಬದಲು ಮತ್ತೊಬ್ಬರ ವ್ಯಕ್ತಿತ್ವಕ್ಕೆ ಕಳಂಕ ಹಚ್ಚುವ ಪ್ರಯತ್ನ ಮಾಡುತ್ತಾರೆ. ಇಂತಹ ಮನಸ್ಥಿತಿ ಕೇವಲ ವ್ಯಕ್ತಿಯೊಬ್ಬನ ಸಮಸ್ಯೆಯಲ್ಲ; ಅದು ಸಮಾಜದ ಆರೋಗ್ಯವನ್ನೇ ಹಾಳುಮಾಡುವ ಮಾನಸಿಕ ವ್ಯಾಧಿಯಾಗಿದೆ.

ಹೊಟ್ಟೆಕಿಚ್ಚು ಎನ್ನುವುದು ಇನ್ನೊಬ್ಬರ ಯಶಸ್ಸನ್ನು ತನ್ನ ಸೋಲಾಗಿ ಭಾವಿಸುವ ಮನೋಭಾವದಿಂದ ಹುಟ್ಟಿಕೊಳ್ಳುತ್ತದೆ. ಒಬ್ಬ ವ್ಯಕ್ತಿ ತನ್ನ ಸಾಮರ್ಥ್ಯದ ಮೇಲೆ ನಂಬಿಕೆ ಕಳೆದುಕೊಂಡಾಗ, ಇನ್ನೊಬ್ಬರ ಬೆಳವಣಿಗೆಯೇ ಆತನಿಗೆ ನೋವಾಗಿ ಕಾಣುತ್ತದೆ. ಹೀಗಾಗಿ ಆತ ತನ್ನ ಸಮಯ ಮತ್ತು ಶಕ್ತಿಯನ್ನು ಸಾಧನೆಗೆ ಬಳಸುವ ಬದಲು ಮತ್ತೊಬ್ಬರ ತಪ್ಪುಗಳನ್ನು ಹುಡುಕುವುದರಲ್ಲಿ ವ್ಯರ್ಥ ಮಾಡುತ್ತಾನೆ. ಇನ್ನೊಬ್ಬರ ಯಶಸ್ಸು ಆತನಿಗೆ ಪ್ರೇರಣೆಯಾಗದೆ ಅಸೂಯೆಗೆ ಕಾರಣವಾಗುತ್ತದೆ.

ಹೊಟ್ಟೆಕಿಚ್ಚು ಕ್ರಮೇಣ ದ್ವೇಷವಾಗಿ ರೂಪಾಂತರಗೊಳ್ಳುತ್ತದೆ. ಆಗ ವ್ಯಕ್ತಿಯು ಇನ್ನೊಬ್ಬರ ಬಗ್ಗೆ ಅಪಪ್ರಚಾರ ಮಾಡಲು ಆರಂಭಿಸುತ್ತಾನೆ. ಒಬ್ಬರ ಎದುರು ಮತ್ತೊಬ್ಬರ ಬಗ್ಗೆ ನಕಾರಾತ್ಮಕವಾಗಿ ಮಾತನಾಡುತ್ತಾನೆ. ವ್ಯಕ್ತಿತ್ವ ಹರಣದ ಮೂಲಕ ತನ್ನನ್ನು ದೊಡ್ಡವನಾಗಿ ತೋರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ವಾಸ್ತವದಲ್ಲಿ ಇಂತಹ ವರ್ತನೆ ಆತನ ವ್ಯಕ್ತಿತ್ವದ ದೌರ್ಬಲ್ಯವನ್ನೇ ಬಯಲಿಗೆಳೆಯುತ್ತದೆ. ಏಕೆಂದರೆ ಗಟ್ಟಿಯಾದ ವ್ಯಕ್ತಿತ್ವವು ಇನ್ನೊಬ್ಬರನ್ನು ಕೆಳಗೆ ತಳ್ಳುವುದರಿಂದ ನಿರ್ಮಾಣವಾಗುವುದಿಲ್ಲ; ತನ್ನ ಗುಣ, ನಡತೆ ಮತ್ತು ಕಾರ್ಯಗಳಿಂದಲೇ ನಿರ್ಮಾಣವಾಗುತ್ತದೆ.


ಸ್ವಾರ್ಥವು ಈ ಎಲ್ಲ ಮನೋವೃತ್ತಿಗಳ ಮೂಲವಾಗಿದೆ. ಸ್ವಾರ್ಥಿ ವ್ಯಕ್ತಿಗೆ ಸಮಾಜ, ಸಂಬಂಧಗಳು ಮತ್ತು ಮಾನವೀಯತೆಗಿಂತ ತನ್ನ ಲಾಭವೇ ಮುಖ್ಯವಾಗಿರುತ್ತದೆ. ಆತ ಸಂಬಂಧಗಳನ್ನೂ ಒಂದು ಉಪಯೋಗದ ವಸ್ತುವಿನಂತೆ ನೋಡುತ್ತಾನೆ. ತನ್ನ ಲಾಭಕ್ಕೆ ಅನುಕೂಲವಾದಾಗ ಹತ್ತಿರ ಬರುತ್ತಾನೆ; ಇಲ್ಲದಿದ್ದರೆ ದೂರ ಸರಿಯುತ್ತಾನೆ. ಇಂತಹ ಮನೋಭಾವದಿಂದ ಕೊನೆಗೆ ಆತ ಸಮಾಜದಲ್ಲಿಯೇ ಏಕಾಂಗಿಯಾಗುತ್ತಾನೆ.

ಆದರೆ ಯಾವುದೇ ಮನಸ್ಥಿತಿ ಶಾಶ್ವತವಲ್ಲ. ಬದಲಾವಣೆ ಸಾಧ್ಯ. ಅದರ ಮೊದಲ ಹೆಜ್ಜೆ ಆತ್ಮಾವಲೋಕನ. ''ನಾನು ಏಕೆ ಇನ್ನೊಬ್ಬರ ಯಶಸ್ಸನ್ನು ಸಹಿಸಿಕೊಳ್ಳುತ್ತಿಲ್ಲ?'', ''ನಾನು ಏಕೆ ಅವರ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದೇನೆ?'' ಎಂಬ ಪ್ರಶ್ನೆಗಳನ್ನು ಪ್ರತಿಯೊಬ್ಬರೂ ತಮ್ಮೊಳಗೆ ಕೇಳಿಕೊಳ್ಳಬೇಕು. ತನ್ನ ಶಕ್ತಿಯನ್ನು ಇತರರನ್ನು ಟೀಕಿಸುವುದಕ್ಕೆ ಬಳಸುವ ಬದಲು ತನ್ನ ಬೆಳವಣಿಗೆಗೆ ಬಳಸಬೇಕು. ಆಗಲೇ ವ್ಯಕ್ತಿಯೊಳಗಿನ ಅಂಧಕಾರ ಕರಗಲು ಆರಂಭವಾಗುತ್ತದೆ.

ಇನ್ನೊಬ್ಬರ ಯಶಸ್ಸನ್ನು ಅಭಿನಂದಿಸುವ ಗುಣ, ಅವರ ಸಾಧನೆಯಲ್ಲಿ ಪ್ರೇರಣೆಯನ್ನು ಕಂಡುಕೊಳ್ಳುವ ಮನೋಭಾವ, ಪರಸ್ಪರ ಗೌರವ ಮತ್ತು ಸಹಕಾರದ ಮನಸ್ಸು ವ್ಯಕ್ತಿಯನ್ನು ಉನ್ನತಿಯತ್ತ ಕೊಂಡೊಯ್ಯುತ್ತವೆ.

ಮತ್ತೊಬ್ಬರ ದೀಪವನ್ನು ಆರಿಸುವುದರಿಂದ ನಮ್ಮ ದೀಪ ಹೆಚ್ಚು ಪ್ರಕಾಶಿಸುವುದಿಲ್ಲ. ನಮ್ಮ ದೀಪಕ್ಕೆ ಎಣ್ಣೆ ತುಂಬಿದಾಗ ಮಾತ್ರ ಅದು ಬೆಳಗುತ್ತದೆ. ಹಾಗೆಯೇ ಇನ್ನೊಬ್ಬರನ್ನು ಕೆಳಗೆಳೆಯುವುದರಿಂದ ನಮ್ಮ ವ್ಯಕ್ತಿತ್ವ ದೊಡ್ಡದಾಗುವುದಿಲ್ಲ; ನಮ್ಮ ಗುಣಗಳು ಮತ್ತು ಕಾರ್ಯಗಳೇ ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುತ್ತವೆ.

ಆದ್ದರಿಂದ ಹೊಟ್ಟೆಕಿಚ್ಚು, ದ್ವೇಷ ಮತ್ತು ಸ್ವಾರ್ಥದ ಕತ್ತಲೆಯಿಂದ ಹೊರ ಬಂದು ಮಾನವೀಯತೆ, ಆತ್ಮವಿಶ್ವಾಸ ಮತ್ತು ಸಹಬಾಳ್ವೆಯ ಬೆಳಕಿನತ್ತ ಸಾಗುವುದು ಇಂದಿನ ಸಮಾಜದ ಅಗತ್ಯವಾಗಿದೆ. ವ್ಯಕ್ತಿಯ ನಿಜವಾದ ಮಹತ್ವ ಅವನು ಎಷ್ಟು ಜನರನ್ನು ಸೋಲಿಸಿದನೆಂಬುದರಲ್ಲಿ ಇಲ್ಲ; ಎಷ್ಟು ಜನರ ಬದುಕಿಗೆ ಬೆಳಕಾದನೆಂಬುದರಲ್ಲಿ ಇದೆ.



-ತಾಯಪ್ಪ ಮರ್ಚಟ್ಹಾಳ್,
ರಾಯಚೂರು

ಮುಂಗಾರು ಹಂಗಾಮಿನ 126ನೇ ನೀರಾವರಿ ಸಲಹಾ ಸಮಿತಿ ಸಭೆ

ತುಂಗಭದ್ರಾ ಕಾಲುವೆಗಳಿಗೆ 90 ದಿನಗಳವರೆಗೆ ಮಾತ್ರ ನೀರು ಹರಿಸಲು ನಿರ್ಣಯ



ಬಳ್ಳಾರಿ,ಆ.12

ತುಂಗಭದ್ರಾ ಜಲಾಶಯದಲ್ಲಿ ಸದ್ಯ 82 ಟಿಎಂಸಿ ನೀರು ಶೇಖರಣೆಯಾಗಿದ್ದು, ಈ ಲಭ್ಯತೆ ಆಧರಿಸಿ ಕಾಲುವೆಗಳಿಗೆ 90 ದಿನಗಳ ಅವಧಿವರೆಗೆ ಮಾತ್ರ ನೀರು ಹರಿಸಲು ಸಚಿವ ಶಿವರಾಜ ತಂಗಡಗಿ ಅವರ ಅಧ್ಯಕ್ಷತೆಯಲ್ಲಿ ಮುನಿರಾಬಾದ್‌ನ ಕಾಡಾ ಟಿ.ಬಿ.ಪಿ. ಸಭಾಂಗಣದಲ್ಲಿ ಮಂಗಳವಾರ ನಡೆದ ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ 126ನೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಯಿತು.

ಸದ್ಯ ಈಗ ಜಲಾಶಯದಲ್ಲಿ 82 ಟಿಎಂಸಿ ನೀರು ಇದೆ. 120 ದಿನಗಳವರೆಗೆ ನೀರು ಹರಿಸಲು ಜಲಾಶಯದಲ್ಲಿ 16 ಟಿಎಂಸಿ ನೀರಿನ ಕೊರತೆಯಿದೆ. ಮುಂದಿನ ದಿನಗಳಲ್ಲಿ ಇನ್ನು 16 ಟಿಎಂಸಿ ನೀರು ಬರುತ್ತದೆ ಎಂದು ನಿರೀಕ್ಷಿಸಲಾಗಿದೆ. ಕುಡಿಯುವ ನೀರಿಗಾಗಿ ಜಲಾಶಯದಲ್ಲಿ 10 ಟಿಎಂಸಿ ನೀರು ಇಟ್ಟುಕೊಳ್ಳಲೇಬೇಕಾಗುತ್ತದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ರೈತರ ಬೇಡಿಕೆಯಂತೆ 120 ಗಳವರೆಗಾದರು ಸದ್ಯ ಕಾಲುವೆಗಳಿಗೆ ನೀರು ಹರಿಸುವುದು ತುಂಬಾ ಅಗತ್ಯವಿದೆ ಎಂದು ಸಚಿವ ಬಿ.ನಾಗೇಂದ್ರ ಹಾಗೂ ಶಾಸಕರಾದ ಜೆ.ಎನ್ ಗಣೇಶ ಮತ್ತು ಬಿ.ಎಂ ನಾಗರಾಜ ಅವರು ಸಲಹೆ ಮಾಡಿದರು. ಕೊಪ್ಪಳ, ರಾಯಚೂರು, ವಿಜಯನಗರ ಜಿಲ್ಲೆಗಳ ಶಾಸಕರು ಸಹ ಕಾಲುವೆಗಳಿಗೆ ತುರ್ತಾಗಿ ನೀರು ಬಿಡಲು ಸಲಹೆ ಮಾಡಿದ್ದಾರೆ. ಕಾಲುವೆಗಳಿಗೆ ಸದ್ಯ ನೀರು ಹರಿಸಲೇಬೇಕು ಎಂದು ಬೆಳಗ್ಗೆ ರೈತ ಮುಖಂಡರು ಸಹ ಹಕ್ಕೊತ್ತಾಯ ಮಾಡಿದ್ದಾರೆ. ಎಲ್ಲರ ಸಲಹೆಯಂತೆ ನೀರಿನ ಲಭ್ಯತೆ ಆಧರಿಸಿ ಸದ್ಯ 90 ದಿನಗಳ ಅವಧಿವರೆಗೆ ಮಾತ್ರ ಕಾಲುವೆಗಳಿಗೆ ನೀರು ಹರಿಸುವುದು ಸೂಕ್ತ ಎಂದು ಸಭೆಯಲ್ಲಿ ಒಮ್ಮತದಿಂದ ನಿರ್ಣಯಿಸಲಾಯಿತು.

ಸೆಪ್ಟೆಂಬರ್ 11ಕ್ಕೆ ಪುನಃ ಸಭೆ:

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕಾಲುವೆಗೆ ನೀರು ಹರಿಸುವ ಸಂಬಧ ಬೆಳಗ್ಗೆ ರೈತರ ಸಲಹೆ ಪಡೆಯಲಾಗಿದೆ. ಬಳಿಕ ಈ ಭಾಗದ ಎಲ್ಲ ಜನ ಪ್ರತಿನಿಧಿಗಳ ಸಭೆ ನಡೆಸಿ ಅವರ ಸಲಹೆ ಪಡೆಯಲಾಗಿದೆ. ಎಲ್ಲರ ಸಲಹೆ ಪಡೆದುಕೊಂಡೇ ಸದ್ಯ 90 ದಿನಗಳವರೆಗೆ ಮಾತ್ರ ಕಾಲುವೆ ನೀರು ಹರಿಸಲು ನಿರ್ಣಯಿಸಲಾಗಿದೆ. ಸದ್ಯ ಜಲಾಶಯದಲ್ಲಿ ಇರುವ ನೀರಿನ ಲಭ್ಯತೆ ಆಧರಿಸಿಯೇ ಈಗ 90 ದಿನಗಳಿಗೆ ಮಾತ್ರ ನೀರು ಹರಿಸಲು ರೈತರಿಗೆ ಗ್ಯಾರಂಟಿ ಕೊಡುತ್ತೇವೆ. ಮುಂದಿನ ದಿನಗಳಲ್ಲಿ ನೀರು ಹರಿಸುವುದನ್ನು ಮಳೆ ಆಧರಿಸಿಯೇ ನಿರ್ಧರಿಸುತ್ತೇವೆ. ಈ ಬಗ್ಗೆ ಚರ್ಚಿಸಲು ಮುಂದಿನ ತಿಂಗಳು ಸೆಪ್ಟೆಂಬರ್ 11ಕ್ಕೆ ಪುನಃ ಸಭೆ ನಡೆಸಿ ಚರ್ಚಿಸುತ್ತೇವೆ ಎಂದು ಸಚಿವರು ತಿಳಿಸಿದರು.

ಸಭೆಯಲ್ಲಿ ಸಚಿವರಾದ ಬಿ ನಾಗೇಂದ್ರ, ಕಾಡಾ ಅಧ್ಯಕ್ಷರಾದ ಹಸನಸಾಬ ನಬಿಸಾಬ ದೋಟಿಹಾಳ, ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ, ಕವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್ ಅರಸಿದ್ದಿ, ಜಾಹ್ನವಿ, ಕರ್ನಾಟಕ ನೀರಾವರಿ ನಿಗಮ ನಿಯಮಿತದ ಎಂಜಿನಿಯರ್ ಮನೋಜಕುಮಾರ ಗಡಬಳ್ಳಿ, ಮುನಿರಾಬಾದನ ತುಂಗಭದ್ರಾ ಯೋಜನೆ ವೃತ್ತ ಅಧೀಕ್ಷಕ ಅಭಿಯಂತರ ಎಸ್.ಬಿ ಮಲ್ಲಿಗವಾಡ, ಯರಮರಸನ ತುಂಗಭದ್ರಾ ಕಾಲುವೆ ನಿರ್ಮಾಣ ವೃತ್ತದ ಅಧೀಕ್ಷಕ ಅಭಿಯಂತರ ಸತ್ಯ ನಾರಾಯಾಣ ಶೆಟ್ಟಿ ಹಾಗೂ ಇನ್ನಿತರರು ಇದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ



ಕೊಪ್ಪಳ ಆ.12

ತಳಕಲ್ ಗ್ರಾಮದ ಪ್ರಗತಿಪರ ರೈತ ಶಂಕರರಾವ್ ಕುಲಕರ್ಣಿ ಅವರ ಹೊಲದಲ್ಲಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವತಿಯಿಂದ ತೊಗರಿ ಕುಡಿಚಿವುಟುವ ಯಂತ್ರದ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು.

ತೊಗರಿ ಬೆಳೆಯನ್ನು 35 ಮತ್ತು 55 ದಿನಗಳ ಅಂತರದಲ್ಲಿ ಕುಡಿಚಿವುಟುವುದರಿಂದ ಹೆಚ್ಚಿನ ಕವಲುಗಳು ಹೊಡೆದು, ಹೆಚ್ಚಿನ ಕಾಯಿಗಳು ಹಿಡಿಯುವ ಮೂಲಕ ಇಳುವರಿ ಹೆಚ್ಚಳವಾಗುತ್ತದೆ ಎಂದು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಬದರಿ ಪ್ರಸಾದ್ ಪಿ.ಆರ್. ಅವರು ರೈತರಿಗೆ ತಿಳಿಸಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ಮಹಿಳಾ ಕೃಷಿ ಕಾರ್ಮಿಕರು ತೊಗರಿ ಕುಡಿಚಿವುಟುವ ಕಾರ್ಯದಲ್ಲಿ ತೊಡಗಿದ್ದ ವೇಳೆ, ಯಂತ್ರದ ಮೂಲಕ ಕುಡಿಚಿವುಟುವುದರಿಂದ ಕಡಿಮೆ ವೆಚ್ಚದಲ್ಲಿ ಹಾಗೂ ಶೀಘ್ರವಾಗಿ ಕೆಲಸ ಪೂರ್ಣಗೊಳಿಸಬಹುದು ಎಂದು ವಿಜ್ಞಾನಿಗಳು ವಿವರಿಸಿದರು. ಇದನ್ನು ಪ್ರಾತ್ಯಕ್ಷಿಕೆಯ ಮೂಲಕ ಗಮನಿಸಿದ ಕಾರ್ಮಿಕರು, ಯಂತ್ರದ ಬಳಕೆಯಿಂದ ತಮ್ಮ ಶ್ರಮ ಮತ್ತು ಸಮಯ ಉಳಿತಾಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಆಡಳಿತ ಮಂಡಳಿ ಸದಸ್ಯರಾದ ತಿಮ್ಮಣ್ಣ ಚೌಡಿ ಅವರು ಮಾತನಾಡಿ, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ತಳಕಲ್ ಸುತ್ತಮುತ್ತಲಿನ ಗ್ರಾಮಗಳಲ್ಲಿ ವ್ಯಾಪಕವಾಗಿ ತೊಗರಿ ಬಿತ್ತನೆಯಾಗಿದ್ದು, ಇಂತಹ ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳುವುದರಿಂದ ರೈತರ ಆದಾಯ ಹೆಚ್ಚಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ವಿಶೇಷವಾಗಿ ಈ ವರ್ಷ ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ತೊಗರಿ ಕುಡಿಚಿವುಟುವ ಯಂತ್ರವನ್ನು ತರಲಾಗಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಗತಿಪರ ರೈತ ಶಂಕರರಾವ್ ಕುಲಕರ್ಣಿ ಮಾತನಾಡಿ, ಕಳೆದ ವರ್ಷ ಕೃಷಿ ಕಾರ್ಮಿಕರ ಮೂಲಕ ತೊಗರಿ ಕುಡಿಚಿವುಟುವ ಸಂದರ್ಭದಲ್ಲಿ ಒಂದು ಎಕರೆಗೆ ಸುಮಾರು 6ರಿಂದ 7 ಆಳುಗಳ ಅಗತ್ಯವಿತ್ತು. ಆದರೆ ಯಂತ್ರದ ಮೂಲಕ ಒಬ್ಬ ವ್ಯಕ್ತಿಯೇ ಈ ಕಾರ್ಯವನ್ನು ನಿರ್ವಹಿಸಬಹುದಾಗಿದ್ದು, ಇದರಿಂದ ಕೃಷಿ ಕಾರ್ಮಿಕರ ವೆಚ್ಚ ಗಣನೀಯವಾಗಿ ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನೀಲನಗೌಡ್ರು ಮಾಲಿಪಾಟೀಲ್, ಶುಭಾಸಪ್ಪ ಕೆಂಚರಡ್ಡಿ, ಉಮೇಶ್‌ಗೌಡ್ರು ಪೊಲೀಸ್ ಪಾಟೀಲ್, ವೀರೇಶ್ ಬಿಸನಹಳ್ಳಿ, ಶಂಕರರಾವ್ ಹಿರೇಮನಿ, ಕುಮಾರೆಡ್ಡಿ ಭೀಮರೆಡ್ಡಿ ಸೇರಿದಂತೆ ತಳಕಲ್ ಗ್ರಾಮದ ಹಲವಾರು ರೈತರು ಭಾಗವಹಿಸಿದ್ದರು.

ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಜ್ಞಾನಿಗಳನ್ನು (ಡಾ. ಬದರಿ ಪ್ರಸಾದ್ ಪಿ.ಆರ್., ವಿಸ್ತರಣಾ ಮುಂದಾಳು, ಮೊ. 9900145705) ಸಂಪರ್ಕಿಸಬಹುದು.



ಬಳ್ಳಾರಿ: ಜಿಲ್ಲಾಡಳಿತದಿಂದ ಮುಂದುವರೆದ ಅತಿಕ್ರಮಣ ತೆರವು ಕಾರ್ಯಾಚರಣೆ - ಸರ್ಕಾರಿ ಜಮೀನು ವಶಕ್ಕೆ

ಬಳ್ಳಾರಿ,ಆ.12


ತಾಲೂಕಿನ ಮುಂಡರಗಿ ಕೈಗಾರಿಕಾ ಪ್ರದೇಶದ (ಹಂತ-1) ವ್ಯಾಪ್ತಿಯಲ್ಲಿನ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಶೆಡ್ ಗಳನ್ನು ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ತೆರವುಗೊಳಿಸಲಾಗಿದೆ.

ಮುಂಡರಗಿ ಗ್ರಾಮದ ಸರ್ವೇ ಸಂಖ್ಯೆ 177/2 ರ ವ್ಯಾಪ್ತಿಯ 1.07 ಎಕರೆ ಸರ್ಕಾರಿ ಜಮೀನನ್ನು ಅತಿಕ್ರಮಿಸಿ ಅನಧಿಕೃತವಾಗಿ ಶೆಡ್ ನಿರ್ಮಿಸಲಾಗಿತ್ತು. ಈ ಕುರಿತು ಪರಿಶೀಲನೆ ನಡೆಸಿದ ಅಧಿಕಾರಿಗಳ ತಂಡ, ಬುಧವಾರ ಬೆಳಿಗ್ಗೆ ಬೃಹತ್ ತೆರವು ಕಾರ್ಯಾಚರಣೆ ನಡೆಸಿ, ಅನಧಿಕೃತ ನಿರ್ಮಾಣಗಳನ್ನು ನೆಲಸಮಗೊಳಿಸಿದೆ. ಅದೇರೀತಿಯಾಗಿ ಸರ್ವೇ ನಂ.322 ರ 11.40 ಎಕರೆ ಖರಾಬು ಜಮೀನನ್ನು ಒತ್ತುವರಿ ಮಾಡಲಾಗಿತ್ತು. ಅದನ್ನು ತೆರವುಗೊಳಿಸಲಾಗಿದೆ. ಕಾರ್ಯಾಚರಣೆಯ ವೇಳೆ ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಅನಧಿಕೃತವಾಗಿ ಸರ್ಕಾರಿ ಆಸ್ತಿಗಳನ್ನು ಕಬಳಿಸಲು ಯತ್ನಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಈ ಸಂದರ್ಭದಲ್ಲಿ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ತೆರವುಗೊಳಿಸಿದ ಜಮೀನಿನಲ್ಲಿ ಈ ಜಾಗವು ಸರ್ಕಾರಕ್ಕೆ ಸೇರಿದ್ದು, ಅತಿಕ್ರಮಣ ಮಾಡುವುದು ಶಿಕ್ಷಾರ್ಹ ಅಪರಾಧ ಎಂದು ಎಚ್ಚರಿಕೆ ಫಲಕವನ್ನು ಸಹ ಅಳವಡಿಸಲಾಗಿದೆ.

ತೆರವು ಕಾರ್ಯಾಚರಣೆ ವೇಳೆ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಬಳ್ಳಾರಿ ತಾಲ್ಲೂಕು ತಹಶೀಲ್ದಾರರಾದ ಟಿ.ರೇಖಾ ಸೇರಿದಂತೆ ಆರ್‌ಐ, ವಿಎಚ ಅಧಿಕಾರಿಗಳು, ಪೊಲೀಸ್ ಅಧಿಕಾರಿ- ಸಿಬ್ಬಂದಿ ಹಾಜರಿದ್ದರು.

ಜಿಎಚ್‌ಎನ್ ಕಾಲೇಜಿನಲ್ಲಿ ಅರ್ಥಪೂರ್ಣವಾಗಿ ಜರುಗಿದ ಗ್ರಂಥಪಾಲಕರ ದಿನಾಚರಣೆ



ಕೊಪ್ಪಳ ಆ.12

ಗಂಗಾವತಿ ನಗರದ ಗುಂಜಹಳ್ಳಿ ಹಿರೇನಾಗಪ್ಪ ವಾಣಿಜ್ಯ ಮಹಾವಿದ್ಯಾಲಯದ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಭಾರತೀಯ ಗ್ರಂಥಾಲಯ ವಿಜ್ಞಾನದ ಪಿತಾಮಹ ಪದ್ಮಶ್ರೀ ಡಾ. ಎಸ್. ಆರ್. ರಂಗನಾಥನ್ ಅವರ 134ನೇ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಗ್ರಂಥಪಾಲಕ ಡಾ. ರಾಜಶೇಖರ ಮಹಾದೇವಗೌಡ ಪಾಟೀಲ ಅವರು ಮಾತನಾಡಿ, ರಂಗನಾಥನ್ ರವರ ಗ್ರಂಥಾಲಯ ವಿಜ್ಞಾನದ ಪಂಚಸೂತ್ರಗಳು, ಕೊಲನ್ ವರ್ಗೀಕರಣ ಪದ್ಧತಿ, ಸಾರ್ವಜನಿಕ ಗ್ರಂಥಾಲಯ ಚಳವಳಿ ಹಾಗೂ ಗ್ರಂಥಾಲಯ ಶಾಸನದ ಅಭಿವೃದ್ಧಿಗೆ ನೀಡಿದ ಮಹತ್ವದ ಕೊಡುಗೆಗಳನ್ನು ಸ್ಮರಿಸಿದರು. ''ಗ್ರಂಥಾಲಯವು ಕೇವಲ ಪುಸ್ತಕಗಳನ್ನು ಸಂಗ್ರಹಿಸುವ ಸ್ಥಳವಲ್ಲ; ಅದು ಜ್ಞಾನ, ಶಿಕ್ಷಣ ಮತ್ತು ಚಿಂತನೆಯ ಕೇಂದ್ರವಾಗಬೇಕು. ಡಿಜಿಟಲ್ ಯುಗದಲ್ಲಿ ಇ-ಪುಸ್ತಕ, ಇ-ಜರ್ನಲ್ ಹಾಗೂ ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು, ವಿದ್ಯಾರ್ಥಿಗಳಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವುದು ಇಂದಿನ ಗ್ರಂಥಾಲಯಗಳ ಪ್ರಮುಖ ಜವಾಬ್ದಾರಿಯಾಗಿದೆ'' ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಶರಣಬಸವಯ್ಯ ಅವರು ಮಾತನಾಡಿ, ವಿದ್ಯಾರ್ಥಿಗಳು ಕಾಲೇಜಿನ ಗ್ರಂಥಾಲಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ''ಜೀವನದಲ್ಲಿ ಉತ್ತಮ ಸ್ನೇಹಿತರನ್ನು ಹೊಂದುವುದು ಎಷ್ಟು ಮುಖ್ಯವೋ, ಉತ್ತಮ ಪುಸ್ತಕ ಮತ್ತು ಗ್ರಂಥಾಲಯವನ್ನು ಸ್ನೇಹಿತರನ್ನಾಗಿ ಮಾಡಿಕೊಂಡು ಜ್ಞಾನ ಸಂಪಾದಿಸುವುದೂ ಅಷ್ಟೇ ಮುಖ್ಯ'' ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಹಿರಿಯ ಅಧ್ಯಾಪಕರಾದ ಸೋಮನಗೌಡ ಮಾತನಾಡಿ, ವಿದ್ಯಾರ್ಥಿಗಳು ಗ್ರಂಥಾಲಯದ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಹೆಚ್ಚಿನ ಜ್ಞಾನ ಗಳಿಸಬೇಕು. ಗ್ರಂಥಾಲಯದಲ್ಲಿ ಬೆಳೆಸಿಕೊಳ್ಳುವ ಓದುವ ಹವ್ಯಾಸವು ಭವಿಷ್ಯದಲ್ಲಿ ಉತ್ತಮ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು. ಗ್ರಂಥಾಲಯವನ್ನು ಕೇವಲ ಪರೀಕ್ಷಾ ಸಮಯದಲ್ಲಿ ಬಳಸುವ ಸ್ಥಳವನ್ನಾಗಿಸದೆ, ಜೀವನಪೂರ್ತಿ ಜ್ಞಾನ ನೀಡುವ ಉತ್ತಮ ಸ್ನೇಹಿತನನ್ನಾಗಿ ಮಾಡಿಕೊಳ್ಳೋಣ'' ಎಂಬ ಸಂದೇಶದೊದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಅಧ್ಯಾಪಕರಾದ ಜಯಲಕ್ಷ್ಮಿ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಡಾ. ವೆಂಕಟೇಶ್ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಸಿ ಮತ್ತು ಆರ್ ಸಮಿತಿಯಿಂದ ರಾಯಚೂರು ಕೃಷಿ ವಿವಿ ಕುಲಪತಿ ಹೊರಕ್ಕೆ ವಿದ್ಯಾರ್ಥಿಗಳ ಆಕ್ರೋಶ

ಧಾರವಾಡ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಮಾತ್ರ ಸ್ಥಾನ ನೀಡಲಾಗಿದೆ. 371(ಜೆ) ವಿಶೇಷ ಮೀಸಲಾತಿ ವ್ಯಾಪ್ತಿಗೆ ಒಳಪಡುವ ಕಲ್ಯಾಣ ಕರ್ನಾಟಕದ ಏಕೈಕ ಕೃಷಿ ವಿಶ್ವವಿದ್ಯಾಲಯವಾದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳನ್ನು ಸಮಿತಿಯಿಂದ ಹೊರಗಿಟ್ಟಿರುವುದು ಈ ಭಾಗದ ವಿದ್ಯಾರ್ಥಿಗಳಿಗೆ ಮಾಡಿರುವ ಘೋರ ಅನ್ಯಾಯವಾಗಿದೆ ಎಂದು ಹೇಳಿದರು.

ನಿಯಮಾವಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಸಮಿತಿಗೆ ನೇರವಾಗಿ ಮನವರಿಕೆ ಮಾಡಿಕೊಡಲು ವಿದ್ಯಾರ್ಥಿ ಪ್ರತಿನಿಧಿಗಳಿಗೂ ಅವಕಾಶ ನೀಡಲಾಗಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ಆ.7ರ ಆದೇಶವನ್ನು ತಿದ್ದುಪಡಿ ಮಾಡಿ ರಾಯಚೂರು ಕೃಷಿ ವಿಶ್ವವಿದ್ಯಾಲಯ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ ಹಾಗೂ ಮಂಡ್ಯ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಸಮಿತಿಗೆ ಸೇರ್ಪಡೆ ಮಾಡಬೇಕು. ಅಲ್ಲದೆ, ಪ್ರತಿ ವಿಶ್ವವಿದ್ಯಾಲಯದಿಂದ ಕನಿಷ್ಠ ಇಬ್ಬರು ವಿದ್ಯಾರ್ಥಿ ಪ್ರತಿನಿಧಿಗಳಿಗೆ ಸಮಿತಿಯಲ್ಲಿ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗಳು: ರಾಜ್ಯದಲ್ಲಿ ಪ್ರತಿ ವರ್ಷ / ನೇಮಕಾತಿ ನಡೆಸಬೇಕು. / ನೇಮಕಾತಿಯಿಂದ - ಕಾಲೇಜನ್ನು ಹೊರಗಿಡಬೇಕು. .. ಬಯೋಟೆಕ್ನಾಲಜಿ ವಿಭಾಗವನ್ನು ನೇಮಕಾತಿಯಿಂದ ರದ್ದುಪಡಿಸಬೇಕು. ನೇಮಕಾತಿಯಲ್ಲಿ ಶೇ.2ರಷ್ಟು ಕ್ರೀಡಾ ಮೀಸಲಾತಿ ಜಾರಿಗೊಳಿಸಬೇಕು. ಕಾರ್ಯಕ್ರಮವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಹಾಗೂ ಖಾಸಗಿ ಕೃಷಿ ಕಾಲೇಜುಗಳನ್ನು ಕೂಡಲೇ ಬಂದ್ ಮಾಡಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಸರ್ಕಾರ ಹಾಗೂ ಕೃಷಿ ಸಚಿವರು ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಿ, ಆ.7ರಂದು ಹೊರಡಿಸಿರುವ ಆದೇಶವನ್ನು ತಕ್ಷಣ ತಿದ್ದುಪಡಿ ಮಾಡಬೇಕು ಎಂದು ರಾಜೇಶ್ ಕುಮಾರ್ ಒತ್ತಾಯಿಸಿದರು.

ಆ.19ರಿಂದ 24 ತಾಸು ಉಪವಾಸ: ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆ.19ರಂದು ಬೆಳಿಗ್ಗೆ 11 ಗಂಟೆಯಿಂದ ಆ.20ರಂದು ಬೆಳಿಗ್ಗೆ 11 ಗಂಟೆಯವರೆಗೆ ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ 24 ತಾಸು ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ಕಲ್ಯಾಣ ಕರ್ನಾಟಕದ ಕೃಷಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಸಂಘದ ವತಿಯಿಂದ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಅಂಕೇಶ್, ಶಿವಪ್ಪ, ರೋಹನ್, ಯುವರಾಜ, ಶ್ರೀಧರ್, ಸದಾನಂದ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜನತೆ ಅಜ್ಞಾನ ತೊಡೆದು ಹಾಕಿ -ಟಿ.ಬಸವರಾಜ

ಸಮಾಜದಲ್ಲಿ ಬೇರುರಿರುವ ಮತಾಂಧತೆಯನ್ನು ತೊಡೆದುಹಾಕುವಲ್ಲಿ ಮಾನವ ಬಂಧುತ್ವ ವೇದಿಕೆ ಮಾಡುತ್ತಿರುವ ಕಾರ್ಯಗಳನ್ನು ನೋಡಿ ಬದಲಾಗಬೇಕು ಮತ್ತು ಮನಸುಗಳನ್ನು ಒಂದುಗೂಡಿಸುವ ಕಾರ್ಯದಲ್ಲಿ ಎಲ್ಲರೂ ಒಂದು ಗೂಡುವಂತಾಗಲಿ ಎಂದು ಕಿವಿ ಮಾತು ಹೇಳಿದರು.

ಪ್ರಾಸ್ತವಿಕವಾಗಿ ಮೇಷಕ್ ದೊಡ್ಡಮನೆ ಮಾತನಾಡಿ ಮಾನವ ಬಂಧುತ್ವ ವೇದಿಕೆಯು ಪ್ರಾರಂಭವಾಗಿ ಒಂದು ದಶಕ ಕಳೆದಿದ್ದು ಇಂದು ಎಲ್ಲಾ ಅಹಿಂದ ವರ್ಗದ ಜನರು ಬಂಧುತ್ವದೊಂದಿಗೆ ಜಾತಿ ಮತ ಬಿಟ್ಟು ಸಹೋದರ ಪರಂಪರೆಯನ್ನು ಬೆಳೆಸುವಲ್ಲಿ ತನ್ನದೇ ಅದ ಚಳುವಳಿಯನ್ನು ಮಾಡುತ್ತಿದೆ. ನಾಗರಪಂಚಮಿ ಹೆಸರಿನಲ್ಲಿ ಕಲ್ಲಿಗೆ ಹಾಲು, ಆಹಾರ ಪದಾರ್ಥ ವ್ಯರ್ಥ ಮಾಡುವ ಬದಲು ಹಸಿದವರಿಗೆ ನೀಡಿದರೆ ಪುಣ್ಯ ಬರುತ್ತದೆ. 12ನೇ ಶತಮಾನದಲ್ಲಿ ವಿಶ್ವಕ್ಕೆ ಸಂಸತ್ತಿನ ಕಲ್ಪನೆ ಕೊಟ್ಟವರು ಮೊದಲಿಗರು ಭಾರತೀಯ ಶರಣರು ವೈಚಾರಿಕತೆ ಬೆಳೆದಿದ್ದೆ ಮೊಟ್ಟ ಮೊದಲು ಭಾರತದ ಮಣ್ಣಲ್ಲಿ ಆದರೆ ಇಂದು 12ನೆ ಶತಮಾನದಲ್ಲಿ ಶಾಸ್ತ್ರ ಹೊಂದಿದವರು ಮತ್ತು ಶಾಸ್ತ್ರ ಹೊಂದಿದ್ದವರು ಶರಣರ ಹತ್ಯೆ ಮಾಡಿದವರೇ ಇಂದು ಕೂಡಾ ಸಂಸತ್ತಿನಲ್ಲಿ ಮೌಢ್ಯ ಬಿತ್ತುವುದರ ಮುಕಾಂತರ ಪ್ರಗತಿಪರ ವಿಚಾರವಂತರನ್ನು ಹತ್ಯೆ ಮಾಡುತ್ತಿರುವುದು ಸಮಾಜ ದ್ರೋಹದ ಕೆಲಸವೆಂದರೂ ಇದನ್ನ ಇಂದಿನ ಸಮಾಜ ಸಹಿಸಬಾರದೆಂದು ಮನವಿ ಮಾಡಿದರು.

ಈ ಸಂಧರ್ಭದಲ್ಲಿ ಕಾಲೇಜಿನ ಪ್ರಾಚಾರ್ಯರು ಹನುಮಂತ ಕೋರಾಪುರ್ ಮಾತನಾಡಿ ಬೆಕ್ಕು ಅಡ್ಡ ಬಂದ್ರೆ ಹಿಂದಕ್ಕೆ ಹೋಗದೆ ಮುಂದೆ ಹೋಗಬೇಕು ಯಾಕೆಂದ್ರೆ ಬೆಕ್ಕು ಕೂಡಾ ಮನುಷ್ಯನಂತೆ ಒಂದು ಜೀವಿ ಇಲ್ಲಿ ಯಾವುದು ಶ್ರೇಷ್ಠವೂ ಇಲ್ಲಾ ನಿಕೃಷ್ಟವು ಇಲ್ಲಾ ಮನುಷ್ಯನಿಗೆ ಶ್ರೇಷ್ಠತೆಯ ವ್ಯಸನ ಬರಬರದೆಂದರೂ. ವಿಜಯ ಕುಮಾರ್ ರೆಡ್ಡಿಯವರು ಕೂಡಾ ಮಾತನಾಡಿದರು.

ಈ ಸಂದರ್ಭದಲ್ಲಿ ತಿಮ್ಮಣ್ಣ ಕಟ್ಟಿಮನಿ.ರಂಗನಾಥ ಪ ಪಂ ಸದಸ್ಯರು. ಹೆಚ್ ಕೆ ರಾಘವೇಂದ್ರ . ಹುಲಿಗಪ್ಪ ಮಡಿವಾಳ. ಪ್ರಭಾಕರ್ ಹಾರ್ನಲ್ಲಿ. ಶಿವುಕುಮಾರ್ ಎಂ.ಬಿ.ವಿ ಸಂಚಾಲಕರು. ಮೊಹಮ್ಮದ ಯಾಸಿನ್, ಬಾಲಪ್ಪ, ಕ.ಕಾ.ಪತ್ರಕರ್ತಸಂಘದ ಅದ್ಯಕ್ಷ ಹನುಮೇಶ, ತಿಮ್ಮಣ್ಣ,ಮಹ್ಮದ್ ರಫಿ, ನಾಗರಾಜ,ಗೋಪಾಲ ಹೊಸಮನೆ,ಶಶಿಕಾಂತ್, ಮೋನೇಶ್,ಅಮರೇಶ್ ನುಗಡೋಣಿ,ಜಾವೀದ್, ಮಾರೆಪ್ಪ ಗುಡದಿನ್ನಿ,ಮಂಜು ಮರಾಟ ಇತರರು ಇದ್ದರು.

ರಾಯಚೂರು ಜಿಲ್ಲೆ ದಲಿತರನ್ನು ಕೊಲೆ ಮಾಡುವ ವೆಬ್ ಆಗಿದೆ -ರವೀಂದ್ರನಾಥ ಪಟ್ಟಿ

ಮಾರೆಪ್ಪ, ಅವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು. ಪ್ರಕರಣದ ಆರೋಪಿಯೊಬ್ಬರನ್ನು ಆರೋಪಿಗಳ ಪಟ್ಟಿಯಿಂದ ಕೈಬಿಡುವಂತೆ ಮನವಿ ಸಲ್ಲಿಸಿರುವ ಜಿಲ್ಲಾ ಪರಿಶಿಷ್ಟ ಜಾತಿ ದೌರ್ಜನ್ಯ ತಡೆ ಸಮಿತಿ ಸದಸ್ಯರನ್ನು ಸಮಿತಿ ಸದಸ್ಯತ್ವದಿಂದ ವಜಾಗೊಳಿಸಬೇಕು ಹಾಗೂ ಹತ್ಯೆಗೀಡಾದ ಕುಟುಂಬಕ್ಕೆ ಬೆದರಿಕೆ ಹಾಕುತ್ತಿರುವ ಆರೋಪವಿರುವ ಪ್ರಭು ರಾಮಸ್ವಾಮಿ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

''ನಾಲ್ವರು ಶಾಸಕರು, ಒಬ್ಬ ಸಂಸದ ಮೌನ''

ಹಿರಿಯ ದಲಿತ ಮುಖಂಡ ರವೀಂದ್ರನಾಥ ಪಟ್ಟಿ ಮಾತನಾಡಿ, ರಾಯಚೂರು ಜಿಲ್ಲೆಯಲ್ಲಿ ನಾಲ್ವರು ಶಾಸಕರು ಹಾಗೂ ಒಬ್ಬ ಸಂಸದರು ಇದ್ದರೂ ಭೂಮಾನಂದ ಹತ್ಯೆ ಪ್ರಕರಣದ ಕುರಿತು ಈವರೆಗೆ ಧ್ವನಿ ಎತ್ತದಿರುವುದು ವಿಷಾದನೀಯ. ''ರಾಯಚೂರು ಜಿಲ್ಲೆ ದಲಿತರನ್ನು ಕೊಲೆ ಮಾಡುವ ವೆಬ್ ಆಗಿದೆ'' ಎಂದು ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಐದು ವರ್ಷಗಳ ಹಿಂದೆ ಕಮಲಾಪುರದಲ್ಲಿ ಹಾಗೂ ಎರಡು ವರ್ಷಗಳ ಹಿಂದೆ ಮಾದ್ಲಾಪುರದಲ್ಲಿ ನಡೆದ ಕೊಲೆ ಪ್ರಕರಣಗಳಲ್ಲಿಯೂ ನಾಯಕ ಸಮುದಾಯದವರ ಪಾತ್ರವಿದೆ ಎಂದು ಆರೋಪಿಸಿದ ಅವರು, ಇಂತಹ ಘಟನೆಗಳ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ, ಕಳೆದ ಎರಡು ವರ್ಷಗಳ ಘಟನೆಗಳ ಸಂಪೂರ್ಣ ಮಾಹಿತಿಯನ್ನು ಕಲೆಹಾಕಬೇಕು ಎಂದು ಒತ್ತಾಯಿಸಿದರು.

ಭೂಮಾನಂದ ಹತ್ಯೆ ನಡೆದ ಸ್ಥಳಕ್ಕೆ ಇದುವರೆಗೂ ದೇವದುರ್ಗ ಶಾಸಕಿ ಹಾಗೂ ಜಿಲ್ಲಾಧಿಕಾರಿ ಭೇಟಿ ನೀಡದಿರುವುದು ಜಿಲ್ಲಾಡಳಿತದ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಆರೋಪಿಸಿದರು. ರಘುವೀರ ನಾಯಕ ಅವರ ಜಿಲ್ಲಾ ಪರಿಶಿಷ್ಟ ಜಾತಿ ದೌರ್ಜನ್ಯ ತಡೆ ಸಮಿತಿ ಸದಸ್ಯತ್ವವನ್ನು ರದ್ದುಪಡಿಸಬೇಕು ಎಂದು ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ದಲಿತರ ಮೇಲೆ ನಡೆಯುವ ಕೃತ್ಯಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರೇ ನೇರ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು, ಘಟನೆ ನಡೆದು ಹಲವು ದಿನಗಳಾದರೂ ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕುಟುಂಬಕ್ಕೆ ಧೈರ್ಯ ತುಂಬದಿರುವುದು ಖಂಡನೀಯ ಎಂದರು.

ಆ.15ರಂದು ಕಪ್ಪುಪಟ್ಟಿ ಪ್ರತಿಭಟನೆ

ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಧರಂಸಿಂಗ್ ಅವರು ಬರ ವೀಕ್ಷಣೆಗೆ ಹದ್ದಿನಾಳ ಸಮೀಪದ ಗ್ರಾಮಕ್ಕೆ ಭೇಟಿ ನೀಡಿದ್ದರೂ ಭೂಮಾನಂದ ಅವರ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳದಿರುವುದನ್ನು ಖಂಡಿಸಿ ಆ.15ರಂದು ಸಚಿವರಿಗೆ ಕಪ್ಪುಪಟ್ಟಿ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಮಾರೆಪ್ಪ ತಿಳಿಸಿದರು.

ಆ.23ರಂದು ಬೈಕ್ ರ್‍ಯಾಲಿ, ಆ.24ರಂದು ಪಾದಯಾತ್ರೆ

ಭೂಮಾನಂದ ಹತ್ಯೆ ಖಂಡಿಸಿ ಹಾಗೂ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಆ.23ರಂದು ಹದ್ದಿನಾಳ ಗ್ರಾಮದಿಂದ ಬೃಹತ್ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ರ್‍ಯಾಲಿಯು ಗಬ್ಬೂರು, ಸುಲ್ತಾನಪುರ, ಮುರಾನಪುರ, ಕಲ್ಮಾಲ ಮಾರ್ಗವಾಗಿ ಅಸ್ಕಿಹಾಳ ಸಮೀಪದ ಮುಗಳಖೋಡ ಮಠ ತಲುಪಿ ವಾಸ್ತವ್ಯ ಹೂಡಲಿದೆ.

ಆ.24ರಂದು ಬೆಳಿಗ್ಗೆ ಮುಗಳಖೋಡ ಮಠದಿಂದ ಪಾದಯಾತ್ರೆ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ವೃತ್ತಕ್ಕೆ ತೆರಳಿ ಬೃಹತ್ ಬಹಿರಂಗ ಸಮಾವೇಶ ನಡೆಸಲಾಗುವುದು. ಬಳಿಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದು. ಜಿಲ್ಲೆಯ ವಿವಿಧ ತಾಲೂಕುಗಳಿಂದ ಸಮಾಜದ ಮುಖಂಡರು ಹಾಗೂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಮುಖಂಡರು ತಿಳಿಸಿದರು.

ಭೂಮಾನಂದ ಹತ್ಯೆ ಪ್ರಕರಣದ ಕುರಿತು ಮೀಸಲು ಕ್ಷೇತ್ರದ ಶಾಸಕರು ಹಾಗೂ ಸಂಸದರು ತಮ್ಮ ಮೌನ ಮುರಿದು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ನ್ಯಾಯದ ಪರ ತಮ್ಮ ನಿಲುವನ್ನು ಬಹಿರಂಗಪಡಿಸಬೇಕು ಎಂದು ಮಾರೆಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರವೀಂದ್ರನಾಥ ಪಟ್ಟಿ, ಜಿ. ಶಿವರಾಜ ಅಕ್ಕರಕಿ, ಅಂಬಣ್ಣ ಆರೋಲಿಕರ್, ಎಂ.ಆರ್. ಭೇರಿ, ಹೇಮರಾಜ ಅಸ್ಕಿಹಾಳ, ಜೈಭೀಮುವಲ್ಲಭ, ಹನುಮಂತ ಮನ್ನಾಪುರೆ, ನರಸಿಂಹಲು ವಿಶ್ವನಾಥ ಪಟ್ಟಿ, ಈರಣ್ಣ ಡಿಎಸ್‌ಎಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಸೂಚನೆ

ದರೋಜಿ ಕೆರೆ ಸಂರಕ್ಷಣೆ ಮತ್ತು ಮಾಲಿನ್ಯ ತಡೆಗೆ ಕಟ್ಟುನಿಟ್ಟಿನ ಕ್ರಮ

ಬಳ್ಳಾರಿ,ಆ.13

ದರೋಜಿ ಕೆರೆಯ ಜಲಚರ ವ್ಯವಸ್ಥೆ ಹಾಗೂ ಪರಿಸರವನ್ನು ರಕ್ಷಿಸಲು ಮತ್ತು ಮಾಲಿನ್ಯವನ್ನು ಸಂಪೂರ್ಣವಾಗಿ ತಡೆಗಟ್ಟಲು ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಒಗ್ಗೂಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.



ನಗರದ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದರೋಜಿ ಕೆರೆಯು ಅತ್ಯಂತ ಸೂಕ್ಷ್ಮ ಹಾಗೂ ಶ್ರೀಮಂತ ಜಲಚರ ಪರಿಸರ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿ ಬೆಳೆಯುವ ಬೃಹತ್ ಗಾತ್ರದ ದರೋಜಿ ತಳಿಯ ಮೀನುಗಳಿಗೆ ಕೋಲ್ಕತ್ತಾದಂತಹ ದೂರದ ನಗರಗಳಲ್ಲೂ ಭಾರೀ ಬೇಡಿಕೆಯಿದೆ. ಈ ಕೆರೆಯು ಹಿಂದೆ ಎರಡು ಪ್ರತ್ಯೇಕ ಕೆರೆಗಳಾಗಿದ್ದು, ನಂತರದ ದಿನಗಳಲ್ಲಿ ಒಂದಾಗಿ ಮಾರ್ಪಟ್ಟಿದೆ ಎಂದು ತಿಳಿಸಿದರು.

★ಮಾಲಿನ್ಯದ ಮೂಲ ಹಾಗೂ ಕೆರೆ ಹೂಳು ತುಂಬುವಿಕೆ:★ ನಾರಿ ಹಳ್ಳ ಪ್ರದೇಶದಿಂದ ಹರಿದುಬರುವ ನೀರು ಮತ್ತು ಹೂಳು ಕೆರೆಯ ನೀರಿನ ಶೇಖರಣಾ ಸಾಮರ್ಥ್ಯವನ್ನು ಕುಗ್ಗಿಸಿದೆ. ಜೊತೆಗೆ, ಕುಡಿತಿನಿ, ಕುರೇಕುಪ್ಪ ಹಾಗೂ ತೋರಣಗಲ್ಲು ಭಾಗಗಳ ಸಂಸ್ಕರಿಸದ ತ್ಯಾಜ್ಯ ನೀರು ಹಾಗೂ ಘನತ್ಯಾಜ್ಯಗಳು ನೇರವಾಗಿ ಕೆರೆಗೆ ಸೇರುತ್ತಿರುವುದು ಮಾಲಿನ್ಯಕ್ಕೆ ಮುಖ್ಯ ಕಾರಣವಾಗಿದೆ ಎಂದರು.

ಕೆರೆಯ ಮಾಲಿನ್ಯ ನಿಯಂತ್ರಣಕ್ಕೆ ನೀರಾವರಿ ಇಲಾಖೆ, ಅರಣ್ಯ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕುರೇಕುಪ್ಪ, ತೋರಣಗಲ್ಲು ಸ್ಥಳೀಯ ಆಡಳಿತ ಸಂಸ್ಥೆಗಳು, ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆ ಸೇರಿದಂತೆ ಎಲ್ಲಾ ಭಾಗಿದಾರರ ಜಂಟಿ ಸಭೆಯನ್ನು ಶೀಘ್ರದಲ್ಲೇ ಕರೆಯಲಾಗುವುದು ಎಂದರು.

ಕಲುಷಿತ ನೀರು ಸಂಸ್ಕರಣೆ ಮತ್ತು ಕ್ರಿಯಾ ಯೋಜನೆ:

ಕೆರೆಗೆ ಕಲುಷಿತ ನೀರು ಹರಿಯುವ ಸ್ಥಳಗಳನ್ನು ಗುರುತಿಸಿ, ನೀರು ಕೆರೆ ಸೇರುವ ಮುನ್ನವೇ ಸಂಸ್ಕರಿಸಲು ಸ್ಪಷ್ಟ ಕ್ರಿಯಾ ಯೋಜನೆ ತಯಾರಿಸಲಾಗುವುದು. ತ್ಯಾಜ್ಯ ನೀರು ಮತ್ತು ಕೈಗಾರಿಕಾ ಕಲುಷಿತ ನೀರನ್ನು ಸಂಸ್ಕರಿಸಿದ ನಂತರವೇ ಬಿಡಲು ಕಟ್ಟುನಿಟ್ಟಿನ ಸೂಚನೆ ನೀಡಲಾಗುತ್ತದೆ ಎಂದರು.

★ಸಂರಕ್ಷಣೆ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ:★ ಕೆರೆಯ ದಂಡೆಯ ಸವೆತ ತಡೆಯಲು ಮತ್ತು ಪರಿಸರ ಸಮತೋಲನ ಕಾಯಲು ಮ್ಯಾಂಗ್ರೋವ್ ಮಾದರಿಯ ಸಸ್ಯಗಳನ್ನು ನೆಡಲು ನಿರ್ಧರಿಸಲಾಗುವುದು. ದರೋಜಿ ಕೆರೆಯು ಪ್ರವಾಸಿ ಆಕರ್ಷಣೆಯ ಸಾಮರ್ಥ್ಯ ಹೊಂದಿದ್ದು, ಕೆರೆಯನ್ನು ಕಲುಷಿತ ಮುಕ್ತಗೊಳಿಸಿ ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗುತ್ತಿದೆ. ಈ ಯೋಜನೆಗೆ ಅಗತ್ಯವಿರುವ ವೆಚ್ಚವನ್ನು ಕೆಎಂಇಆರ್ ಕೆರೆಯ ಜೀವ ವೈವಿಧ್ಯವನ್ನು ಉಳಿಸಲು ಸಮಗ್ರ ಹೆಜ್ಜೆ ಇಡಲಾಗುವುದು ಎಂದರು.

ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳಲ್ಲಿ ನೀರಿನ ಮಟ್ಟ ತೀವ್ರವಾಗಿ ಕುಸಿತ ಕಂಡಿದ್ದು, ರೈತರಲ್ಲಿ ಭಾರೀ ಆತಂಕ ಮೂಡಿಸಿದ್ದು, ಬಳ್ಳಾರಿ ಮತ್ತು ಸಿರುಗುಪ್ಪ ತಾಲೂಕುಗಳಲ್ಲಿನ ಕೆರೆಗಳ ಸ್ಥಿತಿ ಚಿಂತಾಜನಕವಾಗಿವೆ. ಶೇಕಡಾ 30ಕ್ಕಿಂತ ಕಡಿಮೆ ನೀರು ಸಂಗ್ರಹವಾಗಿದೆ. ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 36 ಕೆರೆಗಳಿದ್ದು, ಈ ಪೈಕಿ ಬಳ್ಳಾರಿ ತಾಲೂಕಿನಲ್ಲಿ 7 ಹಾಗೂ ಸಿರುಗುಪ್ಪ ತಾಲೂಕಿನಲ್ಲಿ 29 ಕೆರೆಗಳಿವೆ. ಪ್ರಸ್ತುತ ಹೆಚ್ಚಿನ ಕೆರೆಗಳು ಒಣಗುವ ಹಂತ ತಲುಪಿವೆ. ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಕೆರೆಗಳಲ್ಲಿ ನೀರಿನ ಸಂಗ್ರಹಣೆ ತೀವ್ರ ಪ್ರಮಾಣದಲ್ಲಿ ಕುಸಿದಿದೆ ಎಂದರು.

ಹಿಂಗಾರು ಮುಂಗಾರು ಅಥವಾ ಮಳೆಗಾಲದ ಹಿನ್ನೆಲೆಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕಲುಷಿತ ನೀರು ಸರಬರಾಜಾಗುವುದನ್ನು ತಡೆಯಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ತಕ್ಷಣವೇ ಜಂಟಿ ತಪಾಸಣೆ ನಡೆಸಬೇಕು ಸೂಚನೆ ನೀಡಿದರು.

ಮಳೆ ಮಾಪಕ ಯಂತ್ರಗಳ ವೈಫಲ್ಯ: ಜಿಲ್ಲೆಯಾದ್ಯಂತ ಒಟ್ಟು 46 ಮಳೆ ಮಾಪಕ ಯಂತ್ರಗಳು ಪರಿಶೀಲನೆಯಲ್ಲಿದ್ದು, ಇವುಗಳಲ್ಲಿ ಹಲವು ಯಂತ್ರಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಕೆಎಸ್‌ಎನ್‌ಡಿಎಂಸಿ ಕನ್ಸಲ್ಟೆಂಟ್ ಅವರೊಂದಿಗೆ ಸಮನ್ವಯ ಸಾಧಿಸಿ, ದೋಷಪೂರಿತ ಯಂತ್ರಗಳನ್ನು ತಕ್ಷಣವೇ ದುರಸ್ತಿಗೊಳಿಸಿ ಸಕ್ರಿಯಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ತಾಕೀತು ಮಾಡಿದರು.

ತಾಲ್ಲೂಕು ಮಟ್ಟದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಗಳು ಸರಿಯಾಗಿ ನಡೆಯುತ್ತಿಲ್ಲ. ಸಂಬಂಧಿಸಿದ ಶಾಸಕರೊಂದಿಗೆ ಸಮಯಾವಕಾಶ ಪಡೆದುಕೊಂಡು ಕಡ್ಡಾಯವಾಗಿ ನಡೆಸಬೇಕು. ಅದೇರೀತಿಯಾಗಿ ತಮ್ಮ- ತಮ್ಮ ಇಲಾಖೆಗಳ ಸಾಮಾನ್ಯ ಮಾಹಿತಿ ತಿಳಿದುಕೊಳ್ಳಬೇಕು ಎಂದು ತಾಲೂಕು ಮಟ್ಟದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಲಭ್ಯತೆ, ಬೆಳೆ ವಿಮೆ ನೋಂದಣಿ, ರಸ್ತೆಗಳಲ್ಲಿ ತಗ್ಗು-ಗುಂಡಿ, ರಸ್ತೆ ಮೇಲ್ಸೇತುವೆ ದುರಸ್ತಿ, ನಿರಂತರ ವಿದ್ಯುತ್ ಸರಬರಾಜಿಗೆ ಆದ್ಯತೆ ನೀಡಬೇಕು. ಭಾರತ್ ಜೋಡೋ ಯುವಕರ ಸಂಘ ನೋಂದಣಿ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಜಾಸೇವೆ ಕಾರ್ಯಕ್ರಮ ಆಯೋಜಿಸಲು ದಿನಾಂಕ, ವೇಳಾಪಟ್ಟಿ, ಸ್ಥಳ ನಿಗದಿ ಸೇರಿದಂತೆ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳ ತಡೆಗಾಗಿ ಧೂಮೀಕರಣ ಕಾರ್ಯ ಹಾಗೂ ಸಮುದಾಯಗಳಲ್ಲಿ ಜನ- ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಇಂದುಧರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಅಬ್ದುಲ್ ರೆಹಮಾನ್, ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿಡಿಯೋ ಸಂವಾದದ ಮೂಲಕ ಎಲ್ಲಾ ತಾಲೂಕು ತಹಶೀಲ್ದಾರರು ಉಪಸ್ಥಿತರಿದ್ದರು.

ವಿಬಿಜಿರಾಮ್ ಜೀ ಯೋಜನೆ: ಕಲಕೇರಿ ಗ್ರಾ.ಪಂ.ನಿಂದ ಕೂಲಿಕಾರರಿಗೆ ಕೂಲಿ ಕೆಲಸ

ಕೊಪ್ಪಳ ಆ.13-

ಬರಗಾಲದ ಸಂದರ್ಭದಲ್ಲಿ ಗ್ರಾಮೀಣ ಭಾಗದ ಕೂಲಿಕಾರರಿಗೆ ಸ್ಥಳೀಯವಾಗಿ ಉದ್ಯೋಗ ಒದಗಿಸುವ ಉದ್ದೇಶದಿಂದ ಕಲಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿಬಿಜಿರಾಮ್ ಜೀ ಯೋಜನೆಯಡಿ ಬುಡಶೆಟ್ನಾಳ ಕೆರೆ ಪುನಶ್ಚೇತನ ಕಾಮಗಾರಿ ಕೈಗೊಳ್ಳಲಾಗಿದೆ.



ಆಗಸ್ಟ್ 12ರಂದು ಕಲಕೇರಿ ಗ್ರಾಮದ ಕೆರೆ ಪುನಶ್ಚೇತನ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ತಾಲೂಕು ಐಇಸಿ ಸಂಯೋಜಕ ದೇವರಾಜ ಪತ್ತಾರ ಅವರು ಮಾತನಾಡಿ, ಗ್ರಾಮೀಣ ಭಾಗದ ಕೂಲಿಕಾರರು ಗುಳೆ ಹೋಗುವುದನ್ನು ತಡೆಯಲು ಪ್ರತಿ ಕುಟುಂಬಕ್ಕೆ ಸ್ಥಳೀಯವಾಗಿ 125 ದಿನಗಳ ಕೂಲಿ ಕೆಲಸ ಒದಗಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು. ಯೋಜನೆಯಡಿ ಸಾಮುದಾಯಿಕ ಹಾಗೂ ವೈಯಕ್ತಿಕ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದ್ದು, ಪುರುಷರು ಮತ್ತು ಮಹಿಳೆಯರಿಗೆ ಸಮಾನ ಕೂಲಿ ನಿಗದಿಪಡಿಸಲಾಗಿದೆ. ಜಲ ಸಂರಕ್ಷಣೆ, ನೀರಾವರಿ, ಅಂತರ್ಜಲ ಮರುಪೂರಣ, ಜಲಾನಯನ ಪ್ರದೇಶದ ಅಭಿವೃದ್ಧಿ ಹಾಗೂ ಜಲಮೂಲಗಳ ಪುನಶ್ಚೇತನ ಸೇರಿದಂತೆ ವಿವಿಧ ಕಾರ್ಯಗಳಿಗೆ ವಿಶೇಷ ಆದ್ಯತೆ ನೀಡಲಾಗಿದೆ. ''ವಿಕಸಿತ ಗ್ರಾಮ ಪಂಚಾಯತಿಯಿದ ವಿಕಸಿತ ಭಾರತದೆಡೆಗೆ'' ಎಂಬ ಆಶಯ ದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು. ವಿಬಿಜಿರಾಮ್ ಜೀ ಯೋಜನೆಯ ಪ್ರತಿಯೊಂದು ಹಂತವನ್ನು ಆನ್‌ಲೈನ್ ಹಾಗೂ ಪಾರದರ್ಶಕ ವ್ಯವಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಕೂಲಿಕಾರರು ಯೋಜನೆಯ ಕುರಿತು ಅಗತ್ಯ ಮಾಹಿತಿಯನ್ನು ಪಡೆದುಕೊಂಡು ಇದರ ಸದುಪಯೋಗ ಪಡೆಯಬೇಕು ಎಂದು ಕರೆ ನೀಡಿದರು. ಪ್ರಸಕ್ತ ಪ್ರತಿ ಮಾನವ ದಿನಕ್ಕೆ ರೂ.382 ಕೂಲಿ ನಿಗದಿಪಡಿಸಲಾಗಿದ್ದು, ಕೂಲಿಕಾರರು ಅಳತೆಗೆ ಅನುಗುಣವಾಗಿ ಕೆಲಸ ನಿರ್ವಹಿಸಿದಲ್ಲಿ ಅದರ ಆಧಾರದ ಮೇಲೆ ಕೂಲಿ ಪಾವತಿಸಲಾಗುತ್ತದೆ ಎಂದು ತಿಳಿಸಿದರು. ಕೂಲಿಕಾರರೊಂದಿಗೆ ಸಂವಾದ: ಕೆರೆ ಪುನಶ್ಚೇತನ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೂಲಿಕಾರರೊಂದಿಗೆ ತಾಲೂಕು ಐಇಸಿ ಸಂಯೋಜಕರು ಸಂವಾದ ನಡೆಸಿ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ಹಾಜರಾಗುವಂತೆ ತಿಳಿಸಿದರು. ಬಳಿಕ ಕಾಮಗಾರಿಗೆ ಹಾಜರಾಗಿದ್ದ ಕೂಲಿಕಾರರ ಎನ್.ಎಂ. ಎಂ.ಎಸ್ ಹಾಜರಾತಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಬಿಎಫ್ಟಿ ಮಾರುತಿ, ಗ್ರಾಮ ಕಾಯಕ ಮಿತ್ರ ರಾಧಾ, ತಾಂಡಾ ರೋಜಗಾರ್ ಮಿತ್ರ ಯಮನೂರಪ್ಪ ಕಾರಬಾರಿ ಹಾಗೂ ಕಾಯಕ ಬಂಧುಗಳು ಉಪಸ್ಥಿತರಿದ್ದರು.

ಕೈಬಿಡಲು ವಾಲ್ಮೀಕಿ ನಾಯಕ ಮಹಾಸಭಾ ಒತ್ತಾಯ

ಪಟ್ಟಿಯಲ್ಲಿ 8ನೇ ಆರೋಪಿಯಾಗಿ ನಮೂದಾಗಿರುವ ಭೀಮರಾಯ ತಂದೆ ರಾಮಸ್ವಾಮಿ ಹದ್ದಿನಾಳ ಅವರು ರಾಯಚೂರಿನಲ್ಲಿ ವಾಸವಾಗಿದ್ದು, ಪ್ರಕರಣಕ್ಕೂ ಅವರಿಗೂ ಯಾವುದೇ ಸಂಬಂಧವಿಲ್ಲ, ಕಳೆದ 35 ವರ್ಷಗಳಿಂದ ಮಾಧ್ಯಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದಾರೆ. ಅವರ ಹೆಸರಿಗೆ ಕಪ್ಪು ಚುಕ್ಕೆ ತರಲು ಹಾಗೂ ಮಾನಸಿಕ ಹಿಂಸೆ ನೀಡುವ ಉದ್ದೇಶದಿಂದ ಪ್ರಕರಣದಲ್ಲಿ ಹೆಸರು ಸೇರಿಸಲಾಗಿದೆ ಎಂಬ ಅನುಮಾನವಿದೆ ಎಂದು ಭೀಮರಾಯ ಅವರ ವಿಚಾರದಲ್ಲಿ ಅಗತ್ಯವಿದ್ದರೆ ಸಿಡಿಆರ್, ಲೈವ್ ಲೊಕೇಶನ್ ಹಾಗೂ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಬಹುದು. ಕೇವಲ ಹೇಳಿಕೆಗಳ ಆಧಾರದ ಮೇಲೆ ದುರುದ್ದೇಶದಿಂದ ವ್ಯಕ್ತಿಯೊಬ್ಬರ ಹೆಸರನ್ನು ಪ್ರಕರಣದಲ್ಲಿ ಸೇರಿಸುವುದು ಕಾನೂನುಬಾಹಿರವಾಗುತ್ತದೆ. ಆದ್ದರಿಂದ ಭೀಮರಾಯ ತಂದೆ ರಾಮಸ್ವಾಮಿ ಹದ್ದಿನಾಳ ಅವರ ಹೆಸರನ್ನು ಎಫ್‌ಐಆರ್ ಪಟ್ಟಿಯಿಂದ ಕೈಬಿಡಬೇಕು ಎಂದು ಮನವಿ ಮಾಡಲಾಗಿದೆ.

ಇದೇ ಪ್ರಕರಣದಲ್ಲಿ ಇನ್ನೂ ಹಲವು ಅಮಾಯಕರು ಸೇರ್ಪಡೆಯಾಗಿದ್ದು, ಅವರ ದೈನಂದಿನ ಜೀವನ ನಡೆಸುವುದೇ ಕಷ್ಟವಾಗಿದೆ. ಈಗಾಗಲೇ ಬರಗಾಲದ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಯಾರೋ ಮಾಡಿದ ತಪ್ಪಿಗೆ ಮತ್ತಾರೋ ಅಮಾಯಕರು ತೊಂದರೆ ಅನುಭವಿಸಬಾರದು. ಒಬ್ಬ ನಿರಪರಾಧಿಯೂ ಶಿಕ್ಷೆಗೆ ಒಳಗಾಗಬಾರದು ಎಂಬುದು ಕಾನೂನಿನ ಆಶಯವಾಗಿದೆ ಎಂದು ಸಂಘ ತಿಳಿಸಿದೆ.

ಈ ಸಂದರ್ಭದಲ್ಲಿ ಪ.ಪಂಚಾಯತಿ ಸದಸ್ಯರಾದ ಅಮರೇಶ ಗಡ್ಲ, ಚನ್ನಬಸವ ಗಡ್ಲ, ಭರತ್ ನಾಯಕ, ವೆಂಕಟೇಶ ದೊರೆ, ಡಾ.ಯಲ್ಲಪ್ಪ ನಾಯಕ, ರಂಗನಾಥ ನಾಯಕ, ವೀರೇಶ ಮಳಿಗಿ, ಚಿನ್ನಾನ್ ನಾಗರಾಜ, ಜಿ.ಗೋಪಾಲ ನಾಯಕ, ಹನುಮನ ಗೌಡ ನಾಯಕ, ಟಿ.ರಮೇಶ ನಾಯಕ, ಜಿ.ಬಸವರಾಜ, ನವಲಕಲ್ ನಾಗರಾಜ, ಟಿವಿಎಸ್ ಬಸವರಾಜ ನಾಯಕ, ಅಪ್ಪಾಜಿ ನಾಯಕ, ನವಲಕಲ್ ನಾಗೇಶ, ವೆಂಕಟೇಶ ಮುರ್ಕಿಗುಡ್ಡ, ಸಾಬಣ್ಣ ನಾಯಕ ಹುಣಚೇಡಿ, ರವಿ ನಾಯಕ, ಭೀಮೇಶ ನಾಯಕ, ಭೀಮೇಶ ದೊರೆ, ಅಯ್ಯಣ್ಣ ನಾಯಕ ಚಾಗಭಾವಿ, ಸೂರಪ್ಪ ನಾಯಕ, ಶೀಕಂಟಿ ವಿಶ್ವನಾಥ ನಾಯಕ, ಹನುಮೇಶ ನಾಯಕ, ಮಂಜುನಾಥ ನಾಯಕ, ಈರಣ್ಣ ನಾಯಕ ಗಣದಿನ್ನಿ, ನಾಗರಾಜ ಗುಜ್ಜಲ್, ಬಸವರಾಜ ಗುಜ್ಜಲ್, ಅಂಬಣ್ಣ ನಾಯಕ, ಯಂಕೋಬ ನಾಯಕ, ಶಿವುರಾಜ ನಾಯಕ ಜಾಲಪೂರು, ಸುರೇಶ ನಾಯಕ, ಮಂಜುನಾಥ, ವಜ್ರದಯ್ಯ, ಮಲ್ಲಿಕಾರ್ಜುನ ಮಲ್ಲಾಪೂರ, ಅಮರೇಶ ನವಲಕಲ್, ಶೀಕಂಟಿ ಹನುಮಂತರಾಯ, ರಂಗನಾಥ ನಾಯಕ ಸೇರಿದಂತೆ ಇತರರಿದ್ದರು.

ರಾಜ್ಯಾದ್ಯಂತ ಹೋರಾಟ-ವೀರನಗೌಡ ಲೆಕ್ಕಿಹಾಳ

ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗೆ ಮೀಸಲಾದ ಹಣದ ಅವ್ಯವಹಾರದ ಆರೋಪ ಎದುರಿಸುತ್ತಿರುವ ವ್ಯಕ್ತಿಯನ್ನೇ ಮತ್ತೆ ಸಚಿವರನ್ನಾಗಿ ಮಾಡಿರುವುದು ಆ ಸಮುದಾಯಕ್ಕೆ ಮಾಡಿರುವ ದ್ರೋಹವಾಗಿದೆ. ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಟ್ಟು, ಅವರದೇ ಸಮುದಾಯದ ಮತ್ತೊಬ್ಬ ಅರ್ಹರನ್ನು ಸಚಿವರನ್ನಾಗಿ ನೇಮಿಸಬೇಕು ಎಂದು ಆಗ್ರಹಿಸಿದರು.

ನಾಗೇಂದ್ರ ಅವರು ರಾಜೀನಾಮೆ ನೀಡುವವರೆಗೆ ಬಿಜೆಪಿ ಹಾಗೂ ಜೆಡಿಎಸ್ ಜತೆಗೂಡಿ ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲಿದೆ. ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಗುವುದು. ಅಗತ್ಯವಿದ್ದರೆ ಹೋರಾಟವನ್ನು ರಾಜ್ಯಾದ್ಯಂತ ವಿಸ್ತರಿಸಲಾಗುವುದು ಎಂದು ವೀರನಗೌಡ ಲೆಕ್ಕಿಹಾಳ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಕ್ತಾರ ಸಿದ್ದನಗೌಡ ನೆಲಹಾಳ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ವೀರೇಶ್ ನಾಯಕ, ನರಸಿಂಹ ನಾಯಕ ಹಾಗೂ ಜಿಲ್ಲಾ ಮಾಧ್ಯಮ ಸಂಚಾಲಕ ವಿ.ಪಿ. ರೆಡ್ಡಿ ಉಪಸ್ಥಿತರಿದ್ದರು.

ವಿಫಲವಾಗಿದೆ- ಮೊಹಮ್ಮದ್ ಇಬ್ರಾಹಿಂ ಆರೋಪ

ಜಮೀರ್ ಅಹ್ಮದ್ ಸಾಹೇಬರು ಮಾತ್ರ. ಈಗ ಅವರನ್ನು ತೆಗೆದು ಯು.ಟಿ. ಖಾದರ್ ಸಾಹೇಬರಿಗೆ ನೀಡಲಾಗಿದೆ.

ಜಮೀರ್ ಅಹ್ಮದ್ ರಿಗೆ ವಕ್ಫ್ ಸಚಿವಾಲಯವನ್ನು ನೀಡದಿರುವುದು ಕಾಂಗ್ರೆಸ್‌ನ ಬಹುದೊಡ್ಡ ತಪ್ಪಾಗಿದೆ. ಮುಂಬರುವ 2028 ರ ಚುನಾವಣೆಯಲ್ಲಿ ಇದರ ಪರಿಣಾಮವನ್ನು ಅವರು ಅನುಭವಿಸಬೇಕಾಗುತ್ತದೆ.

ಅಂಜುಮನ್ ಸಮಿತಿಯ ವತಿಯಿಂದ ಮತ್ತು ರಾಯಚೂರು ಜಿಲ್ಲೆಯ ಎಲ್ಲಾ ಮುಸ್ಲಿಮರ ಪರವಾಗಿ ಡಿ.ಕೆ. ಶಿವಕುಮಾರ್ ಸಾಹೇಬರಲ್ಲಿ ನಾವು ಈ ಕೋರಿಕೆಯನ್ನು ಮಾಡುತ್ತೇವೆ - ಜಮೀರ್ ಅಹ್ಮದ್ ಸಾಹೇಬರಿಗೆ ವಕ್ಫ್ ಸಚಿವಾಲಯವನ್ನು ಮರಳಿ ನೀಡಿ, ಆಗ ಮುಸ್ಲಿಮರ ಆಸ್ತಿಗಳು ಸುರಕ್ಷಿತವಾಗಿರುತ್ತವೆ ಎಂದು ಅಂಜುಮಾನ ಕಮಿಟಿ ಸಮಿತಿ ಕಾರ್ಯದರ್ಶಿ ಮೊಹಮ್ಮದ್ ಇಬ್ರಾಹಿಂ ಒತ್ತಾಯಿಸಿದ್ದಾರೆ

ಬಳ್ಳಾರಿ ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ: ಶೇ. 81.83 ರಷ್ಟು ಡಿಜಿಟಲೀಕರಣ ಪೂರ್ಣ

ಬಳ್ಳಾರಿ,ಆ.13-

ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಭರದಿಂದ ಸಾಗಿದ್ದು, ಮಂಗಳವಾರದ ಅಂತ್ಯಕ್ಕೆ ಒಟ್ಟು ಮತದಾರರ ನಮೂನೆಗಳ ಪೈಕಿ ಶೇ. 81.83 ರಷ್ಟು ಡಿಜಿಟಲೀಕರಣ ಕಾರ್ಯ ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಎಸ್‌ಐಆರ್ ಅವಧಿ: ಒಟ್ಟು ಮತದಾರರ ಸಂಖ್ಯೆ: 12,29,586. ಮನೆ-ಮನೆ ಸಮೀಕ್ಷೆ ಹಾಗೂ ಡಿಜಿಟಲೀಕರಣ ಅವಧಿ: ಜೂನ್ 30 ರಿಂದ ಆಗಸ್ಟ್ 17.,ಕರಡು ಮತದಾರರ ಪಟ್ಟಿ ಪ್ರಕಟಣೆ: ಆಗಸ್ಟ್ 24., ಮತದಾರರ ನೋಂದಣಿ ಎಸ್‌ಐಆರ್ ನಮೂನೆ ವಿತರಣೆ: ಒಟ್ಟು 12,29,586 ನಮೂನೆಗಳನ್ನು (ಶೇ. 100) ಬಿಎಲ್‌ಒಗಳ ಮೂಲಕ ಸಂಪೂರ್ಣವಾಗಿ ವಿತರಿಸಲಾಗಿದೆ., ಆನ್‌ಲೈನ್ ಸಲ್ಲಿಕೆ: ಒಟ್ಟು 4,606 ಮತದಾರರು ಸ್ವತಃ ಆನ್‌ಲೈನ್ ಮೂಲಕ ನಮೂನೆಗಳನ್ನು ಸಲ್ಲಿಸಿದ್ದಾರೆ.

ಮತದಾರರ ವರ್ಗೀಕರಣ: ಸಮೀಕ್ಷೆಯ ವೇಳೆ ಒಟ್ಟು 2,23,418 ಮತದಾರರ ಮಾಹಿತಿ ಕೆಳಗಿನಂತೆ ಗುರುತಿಸಲ್ಪಟ್ಟಿದೆ. ಶಾಶ್ವತವಾಗಿ ಸ್ಥಳಾಂತರಗೊಡವರು: 1,01,897, ಗೈರುಹಾಜರಿ / ಲಭ್ಯವಿಲ್ಲದವರು: 50,172, ಮೃತಪಟ್ಟವರು: 41,126 ಈಗಾಗಲೇ ನೋಂದಾಯಿತರಾದವರು (ಪುನರಾವರ್ತಿತ): 21,249 ಇತರ ಕಾರಣಗಳು: 8,974

ಜಿಲ್ಲೆಯ 1,227 ಮತಗಟ್ಟೆಗಳ ವ್ಯಾಪ್ತಿಯ 12,29,586 ಮತದಾರರಿಗೆ ವಿತರಿಸಲಾದ ಎಸ್‌ಐಆರ್ ಗಣತಿ ನಮೂನೆಗಳಲ್ಲಿ ಈವರೆಗೆ 10,06,168 ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಆಗಸ್ಟ್ 17ರೊಳಗೆ ಉಳಿದ ಡಿಜಿಟಲೀಕರಣ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಆಗಸ್ಟ್ 24 ರಂದು ಅಧಿಕೃತವಾಗಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಮ್ಮೂರು ಸುದ್ದಿ

ಸಂಪಾದಕೀಯ



ಮಡಿಲ ಮಾಧ್ಯಮಗಳಿಂದ ಮೋಶಾ ರಕ್ಷಣೆ ಸಾಧ್ಯವೇ?

ಮಡಿಲ ಮಾಧ್ಯಮಗಳಿಂದಲೂ ರಕ್ಷಣೆ ಇಲ್ಲ, ಅಕ್ಷೋಹಿಣಿ ಸೈನ್ಯವೂ ನೆರವಿಗೆ ಧಾವಿಸುತ್ತಿಲ್ಲ. ಕೊನೆಪಕ್ಷ ಸ್ವಂತ ಶಕ್ತಿಯಿಂದಲಾದರೂ ಎದ್ದು ನಿಂತು ದೇಶದ ಜನರ ಸಮಸ್ಯೆಗಳನ್ನು ಆಲಿಸುತ್ತಾರ; ಸಂಸತ್ತಿಗೆ ಹಾಜರಾಗಿ, ಕಲಾಪಗಳಲ್ಲಿ ಭಾಗಿಯಾಗಿ, ಪ್ರಶ್ನೆಗಳಿಗೆ ಉತ್ತರಿಸುತ್ತಾರ ಎಂದರೆ ಅದೂ ಇಲ್ಲ. ಇವರನ್ನು ನಾಯಕರು ಎನ್ನಲಾದೀತೆ?

ಮುಂಗಾರು ಅಧಿವೇಶನ ಮುಗಿದರೂ, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಸಂಸತ್ತಿನ ಕಲಾಪಗಳಲ್ಲಿ ಭಾಗಿಯಾಗದೆ, ದೇಶದ ಹೃದಯದಂತಿರುವ ಸಂಸತ್ತಿಗೆ, ಸಂಸತ್ತನ್ನು ಸಂರಕ್ಷಿಸುತ್ತಿರುವ ಪ್ರಜಾಪ್ರಭುತ್ವಕ್ಕೆ ಕಳಂಕ ತಂದುಬಿಟ್ಟರು.

ಏತನ್ಮಧ್ಯೆ ನಾವು ಉತ್ತರಿಸಲು ಸಿದ್ಧರಿದ್ದೇವೆ, ವಿರೋಧ ಪಕ್ಷಗಳ ನಾಯಕರೇ ಸಂಸತ್ತಿನ ಕಲಾಪಗಳಿಗೆ ಹಾಜರಾಗುತ್ತಿಲ್ಲ ಎಂದು ಸುದ್ದಿ ಹಬ್ಬಿಸಿದರು. ಆ ಸುದ್ದಿ ಹಬ್ಬಿಸಲು ಪ್ರಭುತ್ವದ ಪದತಲದಲ್ಲಿ ಪವಡಿಸಿರುವ ಮಡಿಲ ಮಾಧ್ಯಮಗಳನ್ನು ಬಳಸಿಕೊಂಡರು. ಕುತೂಹಲಕರ ಸಂಗತಿ ಎಂದರೆ, ಪಿಟಿಐ ಮತ್ತು ಎಎನ್ಐ ಎಂಬ ಎರಡು ಸುದ್ದಿ ಸಂಸ್ಥೆಗಳನ್ನು ಮಾತ್ರ ಗೃಹ ಸಚಿವ ಅಮಿತ್ ಶಾ ಸಂಸತ್ತಿನ ಅಂಗಳಕ್ಕೇ ಕರೆದು ಮಾತನಾಡಿದರು. ಆದರೆ, ಆ ಸುದ್ದಿ ಸಂಸ್ಥೆಯ ಪತ್ರಕರ್ತರು ಗೃಹ ಸಚಿವರಿಗೆ, ಸದನಕ್ಕೆ ಏಕೆ ಹಾಜರಾಗುತ್ತಿಲ್ಲ ಎಂದು ಪ್ರಶ್ನಿಸಲಿಲ್ಲ.

ಸೋಜಿಗದ ಸಂಗತಿ ಎಂದರೆ, ಬುಧವಾರ ವಯನಾಡು ಸಂಸದೆ ಪ್ರಿಯಾಂಕಾ ಗಾಂಧಿಯವರು ಸಂಸತ್ ಪ್ರವೇಶಿಸುತ್ತಿದ್ದಂತೆ ಮುಗಿಬಿದ್ದ ಪತ್ರಕರ್ತರು(ರಣಹದ್ದುಗಳು) ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು. ಪತ್ರಕರ್ತರ ಪ್ರಶ್ನೆಗಳಿಗೆ ಸಾಮಾನ್ಯವಾಗಿ ನಗುನಗುತ್ತಲೇ ಉತ್ತರಿಸುವ; ಎಂಥದೇ ಸಂದರ್ಭವಾದರೂ ಸಂಯಮ ಕಾಪಾಡಿಕೊಳ್ಳುವ ಪ್ರಿಯಾಂಕಾ ಗಾಂಧಿ, ವಿದ್ಯಾರ್ಥಿಗಳ ಮೇಲೆ ಲಾಠಿ ಚಾರ್ಜ್ ಮಾಡುವಾಗ, ಅವರ ಮೇಲೆ ಪೆಲೆಟ್ ಗನ್‌ಗಳನ್ನು ಹಾಗೂ -47ಗಳನ್ನು ಬಳಸುವಾಗ, ನೀವು ಸಾರ್ವಜನಿಕರಿಗೆ ಉತ್ತರದಾಯಿಗಳಲ್ಲವೇ? ನಿಮ್ಮ ಪ್ರಕಾರ, ಇದಕ್ಕೆ ಯಾರು ಹೊಣೆಗಾರರು? ನಿಮ್ಮಂತೆ ನಾವೂ ಸುಮ್ಮನೆ ಕುಳಿತುಕೊಳ್ಳಬೇಕೇ? ಎಂದು ಕೊಂಚ ಖಾರವಾಗಿಯೇ ಪ್ರಶ್ನಿಸಿದರು.

ಮಾಧ್ಯಮದವರಿಗೆ ಕಿಂಚಿತ್ತಾದರೂ ಅಳುಕು-ಅಂಜಿಕೆ ಅನ್ನುವುದು ಇದ್ದಿದ್ದರೆ, ಮತ್ತೆ ಪ್ರಿಯಾಂಕಾ ಮುಂದೆ ಮೈಕ್ ಹಿಡಿದು ನಿಲ್ಲುತ್ತಿರಲಿಲ್ಲ. ಆದರೆ ಮಾರಿಕೊಂಡವರು, ಮೂರೂ ಬಿಟ್ಟವರು ಮತ್ತೆ ಮತ್ತೆ ಪ್ರಶ್ನೆ ಮಾಡುವುದನ್ನು ಬಿಡಲಿಲ್ಲ.

ಅಷ್ಟೇ ಅಲ್ಲ, ಮುಂಗಾರು ಅಧಿವೇಶನ ಮುಗಿದರೂ ಸದನಕ್ಕೆ ಹಾಜರಾಗದ, ವಿರೋಧ ಪಕ್ಷಗಳ ಪ್ರಶ್ನೆಗೆ ಉತ್ತರಿಸದ ಗೃಹ ಸಚಿವ ಅಮಿತ್ ಶಾ ಅವರನ್ನು ಪ್ರಶ್ನಿಸುವ ಧೈರ್ಯ ತೋರಲಿಲ್ಲ. ಬದಲಿಗೆ, ಅಧಿವೇಶನ ಮುಗಿಯಲು ಇನ್ನು ಒಂದೂವರೆ ದಿನಗಳು ಬಾಕಿ ಇರುವಾಗ, ಸ್ಪೀಕರ್ಗೆ ಪತ್ರ ಬರೆದು, ನೀಟ್ ಚರ್ಚೆಗಾಗಿ ವಿರೋಧ ಪಕ್ಷದವರನ್ನು ಸಮಾಲೋಚಿಸಿ ಎಂದು ವಿನಂತಿಸಿಕೊಳ್ಳುವ ಗೃಹ ಸಚಿವರ ನಾಟಕಕ್ಕೆ ಸುದ್ದಿ ಸಂಸ್ಥೆಗಳಿಂದಲೇ ವ್ಯವಸ್ಥಿತ ವೇದಿಕೆ ಕಲ್ಪಿಸಿಕೊಡಲಾಯಿತು.

ಅದೇ ಸಂದರ್ಭದಲ್ಲಿ ಸಂಸತ್ ಭವನದ ಹೊರಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕಾಣಿಸಿಕೊಂಡರು. ತಕ್ಷಣ ಅವರ ಮೇಲೆ ಮುಗಿಬಿದ್ದ ಪತ್ರಕರ್ತರು(ರಣಹದ್ದುಗಳು), ಜಾರ್ಖಂಡ್ ರಾಜ್ಯದ ರಾಂಚಿಯಲ್ಲಿ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ, ಪೊಲೀಸರ ದೌರ್ಜನ್ಯ, ಸಿಎಂ ರಾಜೀನಾಮೆ ಕುರಿತು ಪ್ರಶ್ನೆಗಳ ಮಳೆಗರೆದರು.

ಅದಕ್ಕೆ ಕೊಂಚವೂ ವಿಚಲಿತರಾಗದ ರಾಹುಲ್ ಗಾಂಧಿ, ಕಳೆದ ಹದಿನೆಂಟು ದಿನಗಳಿಂದ ನಾವು ಕೇಳುತ್ತಿರುವುದು ಎರಡೇ ಪ್ರಶ್ನೆ, ವಿದ್ಯಾರ್ಥಿಗಳ ಮೇಲೆ ಹಲ್ಲೆಗೆ ಆದೇಶಿಸಿದ್ದು ಯಾರು ಮತ್ತು ರಾಮಮಂದಿರ ಹುಂಡಿ ಲೂಟಿಗೆ ಏನು ಕ್ರಮ ಕೈಗೊಂಡಿದ್ದೀರಿ. ಪ್ರತಿದಿನ ಗೃಹ ಸಚಿವರು ಸಂಸತ್ತಿಗೆ ಬರುತ್ತಾರೆ. ಅವರ ಹಿಂದೆ ಮುಂದೆ ಹತ್ತಾರು ಕಾರುಗಳು, ನೂರಾರು ಅಧಿಕಾರಿಗಳು, ಸಿಬ್ಬಂದಿಗಳ ಸರಬರ ಓಡಾಟ ಎಲ್ಲವೂ ನಡೆಯುತ್ತದೆ. ಆದರೆ ಅಧಿವೇಶನಕ್ಕೆ ಬರಲು ಅವರಿಗೆ ಧೈರ್ಯವಿಲ್ಲ. ಈ ನಾಟಕವನ್ನು ನೀವೂ ನೋಡುತ್ತಿದ್ದೀರಿ. ಅಮಿತ್ ಶಾ ಕಲಾಪಕ್ಕೆ ಏಕೆ ಹಾಜರಾಗುತ್ತಿಲ್ಲ, ನೀವೇಕೆ ಅವರನ್ನು ಪ್ರಶ್ನಿಸುತ್ತಿಲ್ಲ. ನನಗೆ ಇಷ್ಟೊಂದು ಪ್ರಶ್ನೆ ಮಾಡುವ ನೀವು ಅವರೆದುರು ಏಕೆ ಇಲಿಗಳಂತೆ ಸುಮ್ಮನೆ ನಿಲ್ಲುತ್ತೀರಿ ಎಂದು ಪತ್ರಕರ್ತರ ಪಡಪೋಶಿತನವನ್ನು ಬಯಲು ಮಾಡಿದರು.

ಕಣ್ಣೆದುರೇ ಅನ್ಯಾಯ, ದೌರ್ಜನ್ಯ, ಜೀವವಿರೋಧಿ ಕೃತ್ಯಗಳು ನಡೆಯುತ್ತಿದ್ದರೂ, ಪತ್ರಕರ್ತರು ಕಂಡೂ ಕಾಣದಂತಿದ್ದಾರೆ. ಅಧಿಕಾರಸ್ಥರ ಸಗಣಿ ತಿಂದು, ಗಂಜಲ ಕುಡಿದು ತೇಲಾಡುತ್ತಿದ್ದಾರೆ. ಅಷ್ಟೇ ಅಲ್ಲ, ಟಿವಿ ಪರದೆಯ ಮೇಲೆ ಗೌರವಾನ್ವಿತ ಪತ್ರಕರ್ತರಂತೆ ಪೋಸು ಕೊಡುವ, ಸಮಾಜಕ್ಕೆ ಬೋಧನೆ ಮಾಡುವ ವ್ಯಕ್ತಿಗಳು, ತೆರೆಯ ಹಿಂದೆ ಮಾಡಬಾರದ ಅಡ್ನಾಡಿ ವ್ಯವಹಾರಗಳನ್ನೆಲ್ಲ ಮಾಡುತ್ತಿದ್ದಾರೆ. ಇದು ಈ ದೇಶ ಇತ್ತೀಚಿನ ವರ್ಷಗಳಲ್ಲಿ ಕಂಡ ಪತ್ರಿಕೋದ್ಯಮ. ಇಂತಹ ಪತ್ರಿಕೋದ್ಯಮವನ್ನು ಪೊರೆಯುತ್ತಿರುವವರು ಕೆಲವೇ ಕೆಲವು ಉದ್ಯಮಪತಿಗಳು.

ಇಂದು ದೇಶದ ಪ್ರಮುಖ ಸುದ್ದಿ ಸಂಸ್ಥೆಗಳ ಮಾಲೀಕತ್ವ ಅಂಬಾನಿ(ನ್ಯೂಸ್ 18), ಅದಾನಿ(ಎನ್‌ಡಿಟಿವಿ), ಜೈನ್(ಟೈಮ್ಸ್), ಸುಭಾಷ್ ಚಂದ್ರ(ಜೀ), ಶೋಭನಾ ಭಾರ್ತಿಯಾ(ಹಿಂದೂಸ್ಥಾನ್ ಟೈಮ್ಸ್), ಸರ್ಕಾ(ಎಬಿಪಿ), ಪುರಿ(ಇಂಡಿಯಾ ಟುಡೇ), ಅಗರ್ವಾಲ್(ದೈನಿಕ್ ಭಾಸ್ಕರ್), ಗುಪ್ತ(ಜಾಗರಣ್) ಕುಟುಂಬಗಳ ಕೈಯಲ್ಲಿದೆ. ಇವರೆಲ್ಲರೂ ಸಂಘದ ಸಂಪರ್ಕದಲ್ಲಿರುವ ಸರ್ಕಾರದ ಫಲಾನುಭವಿಗಳು. ಬಿಜೆಪಿಗೆ ಕೋಟಿಗಟ್ಟಲೆ ದೇಣಿಗೆ ನೀಡಿದವರು.

ಇಂಥವರ ಹಿಡಿತದಲ್ಲಿರುವ ಸುದ್ದಿ ಮಾಧ್ಯಮಗಳಿಂದ ಪ್ರಭುತ್ವವನ್ನು ಪ್ರಶ್ನಿಸುವುದು, ವಸ್ತುನಿಷ್ಠ ವರದಿ ಮಾಡುವುದು, ಶೋಷಿತರ ಪರ ನಿಲ್ಲುವುದು, ಅಸಹಾಯಕರಿಗೆ ಆಸರೆಯಾಗುವುದು, ದಮನಿತರ ದನಿಯಾಗುವುದು ಸಾಧ್ಯವೇ?

ಇತ್ತೀಚಿನ ವಿದ್ಯಾರ್ಥಿ ಹೋರಾಟವನ್ನೇ ನೋಡಿದರೂ, ಭಾರತೀಯ ಮಾಧ್ಯಮ ಪ್ರಭುತ್ವದೊಂದಿಗೆ ರಾಜಿಯಾಗಿ, ಹೋರಾಟವನ್ನು ಹತ್ತಿಕ್ಕಲು ಹವಣಿಸಿತು. ಅಧಿಕಾರಸ್ಥರು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದ್ದರೆ, ಮಾಧ್ಯಮ ಹೋರಾಟವನ್ನು ನಿರ್ಲಕ್ಷಿಸಿತು, ದಾರಿ ತಪ್ಪಿಸಲು ನೋಡಿತು. ಇಷ್ಟಾದರೂ ಪ್ರಧಾನಿ ಮೋದಿಯವರ ಐವತ್ತಾರು ಇಂಚಿನ ಇಮೇಜನ್ನು ವಿದ್ಯಾರ್ಥಿಗಳು ಸೋಷಿಯಲ್ ಮೀಡಿಯಾದಲ್ಲಿ ಹರಾಜು ಹಾಕುವುದನ್ನು ತಡೆಯಲಾಗಲಿಲ್ಲ. ಚಾಣಕ್ಯ, ತಂತ್ರಗಾರ ಎಂಬ ಬಿರುದಾಂಕಿತ ಅಮಿತ್ ಶಾರಂತಹ ಧೈರ್ಯಸ್ಥರು ಬಿಲ ಬಿಟ್ಟು ಹೊರಬರಲಿಲ್ಲ. ಅಂದಮೇಲೆ ಮಡಿಲ ಮಾಧ್ಯಮಗಳನ್ನು ಬಿಜೆಪಿ ಸಾಕಿಕೊಂಡಿರುವುದೇಕೆ, ಇವುಗಳಿಂದ ರಕ್ಷಣೆ ಸಾಧ್ಯವೇ?

ಜೊತೆಗೆ ಐಟಿ, ಇಡಿ, ಸಿಬಿಐ, ಎನ್‌ಎಸ್‌ಎ ಸಂಸ್ಥೆಗಳು, ಚುನಾವಣಾ ಆಯೋಗ, ಸುಪ್ರೀಂ ಕೋರ್ಟ್, ರಾಷ್ಟ್ರಪತಿ ಭವನ, ಸ್ಪೀಕರ್-ಚೇರ್ಮನ್, ರಾಜ್ಯಪಾಲರು, ಸಂಘಪರಿವಾರದ ಬೆಂಬಲಿತ ಐಎಎಸ್-ಐಪಿಎಸ್ ಅಧಿಕಾರಿಗಳು, ಅದರ ಜೊತೆಗೆ ನರೇಟಿವ್ ಬಿಲ್ಡ್ ಮಾಡುವ ಸಂಘಜೀವಿಗಳು, ಪಠ್ಯ ಕ್ರಮ ಬದಲಿಸುವ ಸಂಘಿತಜ್ಞರು, ಬಾಡಿಗೆ ಭಾಷಣಕಾರರು ಮತ್ತು ಎರಡು ರೂಪಾಯಿ ಭಕ್ತರು- ಅಕ್ಷೋಹಿಣಿ ಸೈನ್ಯದ ಬೆಂಬಲವೇ ಬಿಜೆಪಿಗಿದೆ. ಅದರ ನಾಯಕರಾದ ಮೋದಿ ಮತ್ತು ಅಮಿತ್ ಶಾ ಅವರನ್ನು ರಕ್ಷಿಸಲು ಹಗಲಿರುಳು ಶ್ರಮಿಸುತ್ತಿದೆ.

ದುರಂತವೆಂದರೆ, ಸಾಕಿಕೊಂಡ ಮಡಿಲ ಮಾಧ್ಯಮಗಳಿಂದಲೂ ರಕ್ಷಣೆ ಇಲ್ಲ, ಅಕ್ಷೋಹಿಣಿ ಸೈನ್ಯವೂ ನೆರವಿಗೆ ಧಾವಿಸುತ್ತಿಲ್ಲ. ಕೊನೆಪಕ್ಷ ಸ್ವಂತ ಶಕ್ತಿಯಿಂದಲಾದರೂ ಎದ್ದು ನಿಂತು ದೇಶದ ಜನರ ಸಮಸ್ಯೆಗಳನ್ನು ಆಲಿಸುತ್ತಾರ, ಸಂಸತ್ತಿಗೆ ಹಾಜರಾಗಿ, ಕಲಾಪಗಳಲ್ಲಿ ಭಾಗಿಯಾಗಿ, ಪ್ರಶ್ನೆಗಳಿಗೆ ಉತ್ತರಿಸುತ್ತಾರ ಎಂದರೆ ಅದೂ ಇಲ್ಲ. ಇವರನ್ನು ನಾಯಕರು ಎನ್ನಲಾದೀತೆ? ಇವರ ಮುಖವಾಡ ಕಳಚುತ್ತಿರುವ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ನಿಜನಾಯಕರಲ್ಲವೇ? ಇವರೊಂದಿಗೆ ದೇಶದ ಜನ ನಿಲ್ಲಬೇಕಾದ್ದು ನ್ಯಾಯವಲ್ಲವೇ?

ಸ್ವತಂತ್ರ ಭಾರತಕ್ಕೆ 8 ದಶಕಗಳ ಸಂಭ್ರಮ; ಯೋಜನೆಗಳ ಅಬ್ಬರದಲ್ಲಿ ಕರಗುತ್ತಿದೆಯೇ ಬಡವನ ಜೀವ?

ನಮ್ಮ ದೇಶವಾಸಿಗಳ ಅನಾರೋಗ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಆರ್ಥಿಕತೆಯ ಮೇಲೆ ಬಹು ದೊಡ್ಡ ಹೊಡೆತ ಬಿದ್ದಿರುವುದನ್ನು ವರದಿಯೊಂದು ಬಹಿರಂಗಪಡಿಸಿದೆ. ಬೈನ್ ಕಂಪನಿ ಮತ್ತು ನ ವರದಿಯಂತೆ, ನಮ್ಮ ದೇಶ ಪ್ರತಿವರ್ಷ ಸುಮಾರು 0.8 ರಿಂದ 1 ಟ್ರಿಲಿಯನ್ ಡಾಲರ್ (80 ಸಾವಿರ ಕೋಟಿಯಿಂದ 1 ಲಕ್ಷ ಕೋಟಿ)ಗಳಷ್ಟು ಆರ್ಥಿಕ ನಷ್ಟವನ್ನು ಎದುರಿಸುತ್ತಿದೆ. ಇಂತಹ ಆರ್ಥಿಕ ನಷ್ಟಕ್ಕೆ ಕಾರಣ, ಜನರು ಕೆಲಸ ಮಾಡಲು ಸಾಧ್ಯವಾಗದಿರುವುದರ ಜೊತೆಗೆ ಅನಾರೋಗ್ಯದಿಂದಾಗಿ ಕೆಲಸ ಮಾಡುವ ಸಾಮರ್ಥ್ಯ ಕಳೆದುಕೊಳ್ಳುತ್ತಿದ್ದಾರೆ.

ನಾವು ಸ್ವತಂತ್ರ ದೇಶವಾಗಿ ಮೂರು ತಲೆಮಾರುಗಳು ಸಾಗಿ ಹೋಗಿದೆ. ನನಗೀಗ ನಾವು ಹಿಂದುಸ್ತಾನಿಗಳೋ, ಭಾರತೀಯರೋ ಅಥವಾ ಇಂಡಿಯನ್ನರೋ ಎಂಬ ಪ್ರಶ್ನೆಯೂ ಕಾಡುತ್ತಿದೆ. ದೇಶ ಸ್ವಾತಂತ್ರ್ಯ ದಿನಾಚರಣೆಗೆ ಶೃಂಗಾರಗೊಂಡಿದೆ. ನಮ್ಮ ಪಡೆಗಳು ಕವಾಯತು ನಡೆಸುವ ಮೂಲಕ ದೇಶದ ಸುರಕ್ಷತೆ ಮತ್ತು ಘನತೆಯ ಬಗ್ಗೆ ಬೀಗುವಂತೆ ಮಾಡಲು ಸಿದ್ಧಗೊಳ್ಳುತ್ತಿದೆ. ಗೊತ್ತಿರಲಿ, ನಮ್ಮ ದೇಶ ಕೃಷಿ ಅವಲಂಬಿತ ಆರ್ಥಿಕತೆಯನ್ನೇ ಮೊದಲಿಗೆ ಹೆಚ್ಚಾಗಿ ನಂಬಿತ್ತು. ಆದರೆ, ಇವತ್ತು ವೇಗವಾಗಿ ಬೆಳೆಯುತ್ತಿರುವ ಮಾರುಕಟ್ಟೆಗಳಲ್ಲಿ ಒಂದಾಗಿ ರೂಪಾಂತರಗೊಂಡಿದೆ. ನಮ್ಮ ಐಟಿ ವಲಯ ಜಾಗತಿಕ ಶಕ್ತಿಯಾಗಿ ಬೆಳೆದಿದೆ. ಉತ್ಪಾದನಾ ಕೇಂದ್ರಗಳು ಹಗಲಿರುಳು ಚಟುವಟಿಕೆಯಿಂದ ಕೂಡಿದೆ. ಬಾಹ್ಯಾಕಾಶ ಸಂಶೋಧನೆಯಲ್ಲಿ ದೊಡ್ಡ ಸಾಧನೆ ಮಾಡಿದ್ದೆ. ಇದೆಲ್ಲಕ್ಕಿಂತ ಮಿಗಿಲಾಗಿ 1.45 ಶತಕೋಟಿ ಜನಸಂಖ್ಯೆಯ ನಡುವೆ ನೂರಾರು ಭಾಷೆಗಳನ್ನು, ಸಾವಿರಾರು ಸಾಂಸ್ಕೃತಿಕ ಎಳೆಗಳನ್ನು ಹೊಂದಿದ್ದರೂ, ದೇಶವಾಸಿಗಳೆಲ್ಲರೂ ಕೂಡಿಕೊಂಡು ಚುನಾವಣೆಯನ್ನು ವಿಶ್ವಾಸವಾಗಿ ನಡೆಸುತ್ತಿದ್ದಾರೆ.

''ವೈವಿಧ್ಯತೆಯಲ್ಲಿ ಏಕತೆ'' ಎಂಬ ನುಡಿಗಟ್ಟು ಕೇವಲ ಘೋಷಣೆಯಲ್ಲ. ಅದು ನಮ್ಮೆಲ್ಲರ ವಾಸ್ತವ ಎಂಬಂತೆಯೂ ಬದುಕುತ್ತಿದ್ದೇವೆ. ಆದರೂ ನಿಜವಾದ ಪ್ರಾಮಾಣಿಕ ಆಚರಣೆಗೆ ಆತ್ಮವಲೋಕನ ಅಗತ್ಯ ಎಂಬುದು ನನ್ನ ಬಲವಾದ ನಂಬಿಕೆ.

ಸಂವಿಧಾನದಲ್ಲಿ ಪ್ರತಿಪಾದಿಸಲಾದ ''ಸಮಾನತೆ'' ಯ ಭರವಸೆ ಕಾಗದದ ಮೇಲೆಯೇ ಉಳಿದಿದೆ. ಅಕ್ಷರ, ಆಹಾರ, ಆರೋಗ್ಯ ಆರ್ಥಿಕತೆ ಕೆಲವೇ ಕೆಲವರ ಸ್ವತ್ತಾಗಿದೆ. ಇದರಲ್ಲಿ ಮತಕ್ಕಾಗಿ ಅಕ್ಷರ, ಆಹಾರ ಕುರಿತಂತೆ ಹಲವು ಯೋಜನೆಗಳು ಬಂದಿವೆಯಾದರೂ ಆರೋಗ್ಯ ಮಾತ್ರ ಮರೀಚಿಕೆಯಾಗುಳಿದಿದೆ. ಹಾಗಾದರೆ, ಕಳೆದ 80 ವರ್ಷಗಳಿಂದ ದೇಶವಾಸಿಗಳ ಆರೋಗ್ಯಕ್ಕಾಗಿ ಹೂಡಿರುವ ಹೂಡಿಕೆ ತಲುಪಿರುವುದಾದರೂ ಎಲ್ಲಿಗೆ ?

ನಮ್ಮ ದೇಶವಾಸಿಗಳ ಅನಾರೋಗ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದರಿಂದ ಆರ್ಥಿಕತೆಯ ಮೇಲೆ ಬಹು ದೊಡ್ಡ ಹೊಡೆತ ಬಿದ್ದಿರುವುದನ್ನು ವರದಿಯೊಂದು ಬಹಿರಂಗಪಡಿಸಿದೆ. ಬೈನ್ ಕಂಪನಿ ಮತ್ತು ನೆಟ್‌ಹೆಲ್ತ್‌ನ ವರದಿಯಂತೆ, ನಮ್ಮ ದೇಶ ಪ್ರತಿವರ್ಷ ಸುಮಾರು 0.8 ರಿಂದ 1 ಟ್ರಿಲಿಯನ್ ಡಾಲರ್‌ಗಳಷ್ಟು ಆರ್ಥಿಕ ನಷ್ಟವನ್ನು ಎದುರಿಸುತ್ತಿದೆ. ಇಂತಹ ಆರ್ಥಿಕ ನಷ್ಟಕ್ಕೆ ಕಾರಣ, ಜನರು ಕೆಲಸ ಮಾಡಲು ಸಾಧ್ಯವಾಗದಿರುವುದರ ಜೊತೆಗೆ ಅನಾರೋಗ್ಯದಿಂದಾಗಿ ಕೆಲಸ ಮಾಡುವ ಸಾಮರ್ಥ್ಯ ಕಳೆದುಕೊಳ್ಳುತ್ತಿದ್ದಾರೆ. ನಿಜಕ್ಕೂ ನಮ್ಮ ದೇಶವನ್ನು ಅಭಿವೃದ್ಧಿ ಹೊಂದಿದ ದೇಶ ಮಾಡಬೇಕೆಂದರೆ, ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಬೇಕಿದೆ. ಜನರ ಆರೋಗ್ಯ ಸುಧಾರಿಸಿದರೆ ಮಾತ್ರ ದೇಶದ ಆರ್ಥಿಕ ಪ್ರಗತಿ ಉಂಟಾಗುತ್ತದೆ.

ಹೌದು, ಒಂದು ದೇಶದ ಪ್ರಗತಿಯು ಕೇವಲ ಕೈಗಾರಿಕೆ, ತಂತ್ರಜ್ಞಾನ ಅಥವಾ ಹೂಡಿಕೆಯ ಮೇಲಷ್ಟೇ ಅವಲಂಬಿತವಾಗಿಲ್ಲ. ಬದಲಾಗಿ ಅಲ್ಲಿನ ದೇಶವಾಸಿಗಳು ಎಷ್ಟು ಆರೋಗ್ಯವಾಗಿದ್ದಾರೆ ಎಂಬುದರ ಮೇಲೆ ಅಲ್ಲಿನ ಪ್ರಗತಿ ಅವಲಂಬಿತವಾಗಿರುತ್ತದೆ. ಜನರು ಆರೋಗ್ಯವಾಗಿದ್ದರೆ ಗಟ್ಟಿಯಾಗಿ ನಿಂತು ಕೆಲಸ ಮಾಡುತ್ತಾರೆ. ಆಗ ಸಹಜವಾಗಿ ದೇಶದ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡುವರು.

ನೆನಪಿಡಿ ಆಡಳಿತಗಾರರೇ, ಸದ್ಯ ಬಹು ದೊಡ್ಡ ಅವಕಾಶ ಎದುರಿಗಿದೆ. ಅಂದರೆ, ದೇಶದ ಮುಂದೆ ದೊಡ್ಡ ಪ್ರಮಾಣದ ದುಡಿಯುವ ವಯಸ್ಸಿನ ಜನರಿದ್ದಾರೆ. ಇದರ ಪ್ರಯೋಜನ 2019 ಮತ್ತು 2053 ರ ನಡುವೆ ನಮ್ಮ ದೇಶ ಪಡೆಯಲಿದೆ. ಆದರೆ ಇಂತಹ ದೊಡ್ಡ ಪ್ರಮಾಣದ ಜನಸಂಖ್ಯೆ ಅನಾರೋಗ್ಯದಿಂದ ಬಳಲುತ್ತಿದೆ. ಹೀಗಾಗಿ ಇಂತಹ ಅವಕಾಶ ವ್ಯರ್ಥವಾಗುವ ಸಾಧ್ಯತೆಗಳೇ ಹೆಚ್ಚು. ಹೀಗಾಗಿ ಜನರನ್ನು ಆರೋಗ್ಯವಾಗಿಡುವುದು ಬಹಳ ಮುಖ್ಯ.

ಹಾಗಂತ ಸಾರ್ವಜನಿಕ ಆರೋಗ್ಯ ಕ್ಷೇತ್ರದ ಮೇಲೆ ಸರ್ಕಾರ ಹಣ ಹೂಡಿಕೆ ಮಾಡುತ್ತಿಲ್ಲ ಎಂದು ದೂಷಿಸುವ ಪ್ರಯತ್ನ ನನ್ನದಲ್ಲ. ಜೊತೆಗೆ ಕಳೆದ 8 ದಶಕಗಳಿಂದ ದೇಶವನ್ನು ಮುನ್ನಡೆಸಿದ ರಾಜಕೀಯ ಪಕ್ಷಗಳ ಮೇಲೆ ಆಪಾದನೆಯನ್ನು ಎಸಗುತ್ತಿಲ್ಲ. 2026-27ನೇ ಸಾಲಿನ ಬಜೆಟ್‌ನಲ್ಲಿ ಆರೋಗ್ಯ ವಲಯಕ್ಕೆ ನಿರ್ಮಲಾ ಸೀತಾರಾಮನ್ ಅವರು 1.06 ಲಕ್ಷ ಕೋಟಿ ಹಣವನ್ನು ಹಂಚಿಕೆ ಮಾಡಿದ್ದಾರೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿ ಕಂಡಾಗ ಶೇಕಡ 9 ರಷ್ಟು ಹೆಚ್ಚಳ ಆಗಿರುವುದು ಕಂಡು ಬರುತ್ತದೆ. ಆದರೆ ಬಳಕೆಯಲ್ಲಿ ಸಿಬ್ಬಂದಿ ಮತ್ತು ಗುಣಮಟ್ಟದಲ್ಲಿನ ನಿರಂತರ ಅಂತರವು ಕೇವಲ ಹಣ ಹಂಚಿಕೆ ಮಾಡಿ ದೇಶದ ಸಾರ್ವಜನಿಕ ಆರೋಗ್ಯ ವಲಯವನ್ನು ಸರಿಪಡಿಸಲು ಸಾಧ್ಯವಿಲ್ಲ ಎಂಬುದನ್ನು ಸಾರುತ್ತಿದೆ.

ಕಳೆದೊಂದು ದಶಕದಿಂದ ಆರೋಗ್ಯ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಹಣ ಹಂಚಿಕೆ ಪ್ರಮಾಣವನ್ನು ಏರಿಸಿದ್ದು ಮಾತ್ರವಲ್ಲದೆ 1,83,833 ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ.

157 ಹೊಸ ವೈದ್ಯಕೀಯ ಕಾಲೇಜುಗಳನ್ನು ಸಹ ತೆರೆಯಲಾಗಿದೆ. ಆದರೂ ಶೇಕಡ 50ರಷ್ಟು ನಮ್ಮ ದೇಶವಾಸಿಗಳು ಸರ್ಕಾರಿ ಆಸ್ಪತ್ರೆಯತ್ತ ತಲೆಹಾಕುತ್ತಿಲ್ಲ . ಇದಕ್ಕೆ ಗುಣಮಟ್ಟದ ಕೊರತೆ, ಅನಾರೋಗ್ಯದಿಂದ ನಿತ್ರಾಣನಾಗಿದ್ದರೂ ಕಾಯಲೇ ಬೇಕಾದ ಸ್ಥಿತಿ, ಮುಖ್ಯವಾಗಿ ವೈದ್ಯಕೀಯ ಸಿಬ್ಬಂದಿ ಕೊರತೆ ಬಹಳವಾಗಿ ಕಾಡುತ್ತಿದೆ.

ಇಲ್ಲಿ ಗಮನಿಸಬೇಕಾದ ಬಹುದೊಡ್ಡ ಅಂಶ ಒಂದಿದೆ. ಅದು ರಾಷ್ಟ್ರೀಯ ಆರೋಗ್ಯ ಮಿಷನ್ 2026-27 ನೇ ಸಾಲಿನಲ್ಲಿ 39,390 ಕೋಟಿಗಳಷ್ಟು ಪಡೆದುಕೊಂಡಿದೆ. ಇದು ನಿರೀಕ್ಷಿತ ವೆಚ್ಚಕ್ಕಿಂತ ಶೇಕಡ 6.1 ರಷ್ಟು ಅಧಿಕವಾಗಿದೆ.

ಆದರೂ ರಾಷ್ಟ್ರೀಯ ಆರೋಗ್ಯ ಅಭಿಯಾನ ಗೆ ಹಂಚಿಕೆಯಾದ ನಿಧಿಯನ್ನು ಸಂಪೂರ್ಣವಾಗಿ ಬಳಕೆ ಮಾಡುತ್ತಿಲ್ಲ ಎಂಬುದನ್ನು ಕೂಡ ಗಮನಿಸಬೇಕಿದೆ. 2022-23 ಸಾಲಿನಲ್ಲಿ 65 ರಷ್ಟು ಮಾತ್ರ ವ್ಯಯಿಸಲಾಗಿದೆ. 2024-25ರ ಸಾಲಿನಲ್ಲಿ ಶೇಕಡ 62ರಷ್ಟು ಕುಸಿದಿದೆ. ಇದನ್ನು ನವದೆಹಲಿಯ ಫೌಂಡೇಶನ್ ಫಾರ್ ರೆಸ್ಪಾನ್ಸಿವ್ ಗವರ್ನನ್ಸ್ ಸಂಸ್ಥೆ ತಿಳಿಸಿದೆ. ದುರಂತ ಎಂದರೆ ದೇಶದ ಆಡಳಿತವನ್ನು ನಿಯಂತ್ರಿಸುವ ಉತ್ತರ ಪ್ರದೇಶ ಹಾಗೂ ಪಂಜಾಬ್ ನಂತಹ ರಾಜ್ಯಗಳು ಹಂಚಿಕೆಯಾದ ನಿಧಿಯಲ್ಲಿ ಅರ್ಧದಷ್ಟು ಮಾತ್ರ ಬಳಸಿವೆ. ಹೀಗಾಗಿಯೇ ಸಾರ್ವಜನಿಕ ಸೇವೆಯ ಬಳಕೆ ಕುಸಿತಕ್ಕೆ ಒಂದು ಪ್ರಮುಖ ಕಾರಣವಾಗಿದೆ.

2021-22 ರಲ್ಲಿ ದೇಶದ ಆರೋಗ್ಯ ವೆಚ್ಚದಲ್ಲಿ 39 ರಷ್ಟನ್ನು ಜೇಬಿನಿಂದ ತೆಗೆದು ವ್ಯಯಿಸಲಾಗಿದೆ. ಇದು 2014-15ರಲ್ಲಿ ಶೇಕಡ 63ರಷ್ಟಿತ್ತು. ಮನೆಯ ಆರೋಗ್ಯ ವೆಚ್ಚ 2014-15ರಲ್ಲಿ ರೂ 3.02 ಲಕ್ಷ ಕೋಟಿಯಿಂದ 2021-22 ರಲ್ಲಿ 3.56 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ಒಂದೊಮ್ಮೆ ಜನ ಚಿಕಿತ್ಸೆ ಪಡೆಯದಿರಲು ನಿರ್ಧರಿಸಿದರೆ ( )ಕಡಿಮೆಯಾಗುತ್ತದೆ.

2021-22ರ ರಾಷ್ಟ್ರೀಯ ಲೆಕ್ಕ ಪತ್ರ ವರದಿಯಂತೆ, ದೇಶದ



ಪ್ರಧಾನಿಯನ್ನೇ ನಿಯಂತ್ರಿಸುವಷ್ಟು ಶಕ್ತಿಶಾಲಿಯಾಗಿರುವ, ಬಿಹಾರದಲ್ಲಿ ಸರಾಸರಿ ವಾರ್ಷಿಕ ಆರೋಗ್ಯ ಖರ್ಚಿಗೆ 984 ರೂಗಳಷ್ಟನ್ನು ವ್ಯಯಿಸಲಾಗಿದೆ. ಇದನ್ನು ಗಮನಿಸಿದಾಗ ಬಿಹಾರಕ್ಕಿಂತ ಕೇರಳ ಆರೋಗ್ಯ ರಕ್ಷಣೆಗಾಗಿ ವಹಿಸಿರುವ ಕಾಳಜಿ ಅರ್ಥವಾಗುತ್ತದೆ.

ಇನ್ನೂ ಜುಲೈ 2022 ರಿಂದ ಜೂನ್ 2023 ರವರೆಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಾದ ಹೆರಿಗೆ ಸೇರಿದಂತೆ ಆಸ್ಪತ್ರೆಗೆ ದಾಖಲಾಗುವ ಪ್ರತಿ ಮನೆಯವರು ಮಾಡಿರುವ ಸರಾಸರಿ ಜೇಬಿನಿಂದ ಖರ್ಚು ಮಾಡುವ ಅಂದರೆ, ಕ್ರಮವಾಗಿ 4,129 ರೂಗಳಿಂದ 5,290 ರೂ.ಗಳಷ್ಟಿದೆ. ಇದನ್ನು ಅಂಕಿಅಂಶ ಮತ್ತು ಕಾರ್ಯಕ್ರಮ ಸಚಿವಾಲಯದ ಅಡಿಯಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ ನಡೆಸಿದ ಸಮಗ್ರ ವಾರ್ಷಿಕ ಮಾಡ್ಯುಲರ್ ಸಮೀಕ್ಷೆಯೇ ತಿಳಿಸಿದೆ.

ಇದರಂತೆ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಒಂದು ವರ್ಷದಲ್ಲಿ ಆಸ್ಪತ್ರೆಗೆ ದಾಖಲಾಗುವವರ ಸರಾಸರಿ ವೆಚ್ಚ ಕ್ರಮವಾಗಿ 4,496 ಮತ್ತು 6,877 ರೂ.ಗಳಷ್ಟಿದೆ. ಹೀಗಾಗಿ, ಒಟ್ಟು ಆಸ್ಪತ್ರೆ ವೆಚ್ಚದಲ್ಲಿ ನ ಪಾಲನ್ನು ಲೆಕ್ಕ ಹಾಕಿ ಕಂಡಾಗ ನಗರ ಪ್ರದೇಶಗಳಲ್ಲಿ ಜನರು ತಮ್ಮ ಒಳರೋಗಿಗಳ ಆರೈಕೆ ವೆಚ್ಚದ ಶೇಕಡ 77 ರಷ್ಟನ್ನು ತಮ್ಮ ಜೇಬಿನಿಂದ ತೆಗೆದು ಖರ್ಚು ಮಾಡುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿದು ಸುಮಾರು ಶೇಕಡ 92ರಷ್ಟಿದೆ.

ಸಮೀಕ್ಷೆಯ ವರದಿಯನ್ನು ರಾಷ್ಟ್ರೀಯ ಮಾದರಿ ಸಮೀಕ್ಷೆಯು 79ನೇ ಭಾಗವಾಗಿ ನಡೆದಿದೆ. ಇನ್ನೂ ನ 78 ನೇ ಸುತ್ತಿನ ಭಾಗವಾಗಿ 2020-21 ರಲ್ಲಿ ನಡೆಸಲಾದ ಬಹು ಸೂಚಕ ಸಮೀಕ್ಷೆಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ನಿಯತಾಂಕಗಳನ್ನು ಸೇರಿಸಲಾಗಿರಲಿಲ್ಲ.

2017-18ರಲ್ಲಿ ನಡೆದ ಎನ್‌ಎಸ್‌ಎಸ್‌ನ 75ನೇ ಸುತ್ತಿನ ಸಮೀಕ್ಷೆಯಲ್ಲಿ, ಗ್ರಾಮೀಣ ಭಾರತದಲ್ಲಿ ಸರಾಸರಿ 16,676 ರೂ. ಮತ್ತು ನಗರ ಭಾರತದಲ್ಲಿ 26,475 ರೂಗಳಷ್ಟನ್ನು ಆಸ್ಪತ್ರೆಗೆ ದಾಖಲಾಗುವವರ ವೈದ್ಯಕೀಯ ವೆಚ್ಚಕ್ಕಾಗಿ ವ್ಯಯಿಸಲಾಗಿದೆ ಎಂಬುದನ್ನು ತೋರಿಸಿದೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ರಾಷ್ಟ್ರೀಯ ಆರೋಗ್ಯ ಖಾತೆ, ( )ಅಂದಾಜಿನಂತೆ, ಭಾರತದಲ್ಲಿ ಒಟ್ಟು ಆರೋಗ್ಯ ವೆಚ್ಚದ 2021-2022ರ ಹಣಕಾಸು ವರ್ಷದಲ್ಲಿ ಶೇಕಡ 39.4 ರಷ್ಟಿತ್ತು. ಇದು 2014-2015ರ ಹಣಕಾಸು ವರ್ಷದಲ್ಲಿ ಶೇಕಡ 64.2 ರಷ್ಟು ಕಡಿಮೆಯಾಗಿದೆ.

ಇಷ್ಟಲ್ಲದೆ ನಮ್ಮ ದೇಶದ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಕೂಡ ಕೊರತೆಯಿಂದ ನರಳುತ್ತಿದೆ. ಇದು ಎಷ್ಟರಮಟ್ಟಿಗೆ ಎಂದರೆ, ದೇಶದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಶೇಕಡ 80ರಷ್ಟು ತಜ್ಞ ವೈದ್ಯರ ಕೊರತೆ ಇದೆ. ಅಂದರೆ 5 ಜನ ಪ್ರಮುಖ ತಜ್ಞತೆ ಉಳ್ಳವರಾದ ಶಸ್ತ್ರ ಚಿಕಿತ್ಸಕ, ಪ್ರಸೂತಿ ತಜ್ಞರು, ಸ್ತ್ರೀರೋಗ ತಜ್ಞರು ಮತ್ತು ಮಕ್ಕಳ ತಜ್ಞರಲ್ಲಿ ಒಬ್ಬರು ಮಾತ್ರ ಆರೋಗ್ಯ ಕೇಂದ್ರ ಇರುವಲ್ಲಿ ತಂಗುತ್ತಿದ್ದಾರೆ. 2005ರಲ್ಲಿ ಶೇಕಡ 35ರಷ್ಟಿದ್ದ ಕೊರತೆಯೂ 2022-23ರ ವೇಳೆಗೆ ಶೇಕಡ 58ರಷ್ಟು ಕೊರತೆಯನ್ನು ಎದುರಿಸುತ್ತಿದೆ. ಇನ್ನೂ ಹೇಳಬೇಕೆಂದರೆ ಬಹಳ ಪ್ರಮುಖರಾದ ರೇಡಿಯೋ ಗ್ರಾಫರ್ ಗಳ ಕೊರತೆ ಕೂಡ ಸಾಕಷ್ಟಿದೆ. ಇದರಿಂದಾಗಿ ವೈದ್ಯರುಗಳು ಇಮೇಜಿಂಗ್ ಅಧ್ಯಯನ ಮಾಡಲು ಸಾಧ್ಯವಾಗುತ್ತಿಲ್ಲ.

ಜೊತೆಗೆ ಗ್ರಾಮವಾಸಿಗಳು ಜಿಲ್ಲಾ ಆಸ್ಪತ್ರೆಗಳನ್ನು ಎಡತಾಕಿ ಮಾಡಿಸಿಕೊಳ್ಳಲು ಪಡಬಾರದ ಪಾಡು ಪಡುತ್ತಿದ್ದಾರೆ. ಗೊತ್ತಿರಲಿ 2022ರಂತೆ ಸರ್ಕಾರಿ ಆಲೋಪತಿ ವೈದ್ಯರೊಬ್ಬರು ನಿತ್ಯ 7908 ಜನ ರೋಗಿಗಳನ್ನು ತಪಾಸಣೆ ಮಾಡಿ ಚಿಕಿತ್ಸೆ ಕೊಡಬೇಕಿದೆ. 2023ರ ಅಧ್ಯಯನ ಒಂದರಂತೆ, ನಮ್ಮ ದೇಶದಲ್ಲಿ ಪ್ರತಿ 1,666 ಜನರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು ಹಾಸಿಗೆ ಇದೆ.

ಇದು ವಿಶ್ವ ಆರೋಗ್ಯ ಸಂಸ್ಥೆ ಮಾಡಿರುವ ಶಿಫಾರಸ್ಸಿಗಿಂತ 8 ಪಟ್ಟು ಹೆಚ್ಚಿದೆ. 2024-25 ಆರೋಗ್ಯ ಸಚಿವಾಲಯದ ವಾರ್ಷಿಕ ವರದಿಯೊಂದು, ದೇಶದ ಸಾರ್ವಜನಿಕ ಆರೋಗ್ಯ ರಕ್ಷಣಾ ಕ್ಷೇತ್ರದಲ್ಲಿ ಅಗಾಧ ಪ್ರಮಾಣದ ಕೊರತೆ ಇದೆ ಎಂಬುದನ್ನು ಒಪ್ಪಿಕೊಂಡಿದೆ. ಇದನ್ನು ಸರಿಪಡಿಸಲು ರಾಷ್ಟ್ರೀಯ ಆರೋಗ್ಯ ಮಿಷನ್ ಪ್ರಯತ್ನಿಸುತ್ತಿದೆ ಎಂಬ ಸಬೂಬು ಸದ್ಯ ಅಧಿಕಾರಿಗಳಿಂದ ಸಿಗುತ್ತಿದೆ.

ಇದೇನೆ ಇರಲಿ, ಜಗತ್ತಿನ ಹಲವು ದೇಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ , ಯಾವ ದೇಶದ ಜನರು ಹೆಚ್ಚು ಕಾಲ ಬದುಕುತ್ತಾರೋ ಆ ದೇಶದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿರುವುದು ಕಾಣಿಸುತ್ತದೆ. ಒಂದೊಮ್ಮೆ ಆರೋಗ್ಯಕರ ವರ್ಷವನ್ನು ಕಾಪಾಡಿದರೆ, ದೇಶದ ಆದಾಯವನ್ನು ಸುಮಾರು ಶೇಕಡ 7.5 ರಷ್ಟು ಹೆಚ್ಚಿಸಿಕೊಳ್ಳಬಹುದಾಗಿದೆ.

1950 ರಲ್ಲಿ ನಮ್ಮ ದೇಶದ ಜನರ ಸರಾಸರಿ ಜೀವಿತಾವಧಿ 50 ವರ್ಷಗಳಷ್ಟಿತ್ತು. ಅದೀಗ ಸುಮಾರು 61 ವರ್ಷಗಳಷ್ಟಕ್ಕೆ ಬಂದು ನಿಂತಿದೆ.

ಇದನ್ನು ಕನಿಷ್ಠ 70 ವರ್ಷಗಳಷ್ಟು ಹೆಚ್ಚಿಸಿದರೆ, ನಮ್ಮ ದೇಶದ ಆರ್ಥಿಕತೆಯು ಬಹಳ ವೇಗವಾಗಿ ಬೆಳೆಯುತ್ತದೆ. ಇದನ್ನು ಚೀನಾ, ದಕ್ಷಿಣ ಕೊರಿಯಾ ಮತ್ತು ಪೋಲೆಂಡ್‌ನಂತಹ ದೇಶಗಳ ಅಭಿವೃದ್ಧಿಯಲ್ಲಿ ಕಾಣಬಹುದಾಗಿದೆ. ಇವು ತಮ್ಮ ನಾಗರಿಕರ ಆರೋಗ್ಯವನ್ನು ಸುಧಾರಣೆಗೊಳಿಸಿವೆ.ಇದರಿಂದಲೇ ಸಹಜವಾಗಿ ಆರ್ಥಿಕತೆಗೆ ನೇರವಾಗಿ ಕೊಡುಗೆಯನ್ನು ನೀಡಿದೆ. ಇದನ್ನು ಇತ್ತೀಚಿನ ವರ್ಷಗಳಲ್ಲಿ ಅವರು ಉತ್ತಮ ಆರ್ಥಿಕ ಪ್ರಗತಿಯನ್ನು ಸಾಧಿಸಿರುವುದನ್ನು ಗಮನಿಸಬೇಕಿದೆ.

ನಾನಿಲ್ಲಿ ಕಳೆದ 80 ವರ್ಷಗಳಿಂದ ಸರ್ಕಾರ ಸಾರ್ವಜನಿಕ ಆರೋಗ್ಯವಲಯಕ್ಕೆ ಹಣ ಹಂಚಿಕೆ ಮಾಡುತ್ತಿಲ್ಲ. ಯೋನೆಗಳನ್ನು ರೂಪಿಸಿಲ್ಲ ಎನ್ನುತ್ತಿಲ್ಲ. 2026 ರ ಫೆಬ್ರವರಿ ಒಂದರ ಹೊತ್ತಿಗೆ 1,8,833 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ಉಪ ಕೇಂದ್ರಗಳನ್ನು ಹಾಗೂ ನಗರ ಆರೋಗ್ಯ ಕೇಂದ್ರಗಳನ್ನು ಆಯುಷ್ಮಾನ್ ಭಾರತ್ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳನ್ನಾಗಿಸಿ ಮೇಲ್ದರ್ಜೆಗೇರಿಸಲಾಗಿದೆ . ಪ್ರತಿಯೊಂದು ಕೇಂದ್ರಗಳು 3ಸಾವಿರದಿಂದ ದಿಂದ 5ಸಾವಿರ ದಷ್ಟು ಜನರಿಗೆ ಉಪಯೋಗವಾಗುವ ವಿಶ್ವಾಸ ಹೊಂದಲಾಗಿದೆ.

ಇಲ್ಲಿ ಮತ್ತೊಂದು ದುರಂತ ಎಂದರೆ 2024-25 ರಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಹಂಚಿಕೆ ಮಾಡಿದ್ದ ಹಣದಲ್ಲಿ ಕೇವಲ ಶೇಕಡ 40ರಷ್ಟು ಮಾತ್ರ ವ್ಯಯಿಸಲಾಗಿರುವುದನ್ನು ಸರ್ಕಾರೇತರ ಸಂಘಟನೆಯೊಂದು ತಿಳಿಸಿದೆ.

ಇನ್ನಿಲ್ಲಿ 2018 ರಲ್ಲಿ ಪ್ರಾರಂಭಿಸಲಾದ - ಅಡಿಯಲ್ಲಿ ಕೇಂದ್ರ ಸರ್ಕಾರ ಸುಮಾರು 50 ಕೋಟಿ ಭಾರತೀಯರಿಗೆ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಆಧರಿಸಿ ದ್ವಿತೀಯ ಮತ್ತು ತೃತೀಯ ಹಂತದ ಆರೋಗ್ಯ ರಕ್ಷಣೆಗಾಗಿ 5 ಲಕ್ಷ ರೂ.ಗಳ ಆರೋಗ್ಯ ವಿಮಾ ರಕ್ಷಣೆಯನ್ನು ನೀಡುತ್ತದೆ ಎಂದು ಹೇಳಿಕೊಂಡಿದೆ. ಇತ್ತೀಚೆಗಷ್ಟೇ, 70 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರನ್ನು, ಆದಾಯ ಮಿತಿಯನ್ನು ಬದಿಗೆ ಸರಿಸಿ, ಸೇರಿಸಲು ವಿಸ್ತರಿಸಲಾಗಿದೆ.

ಆರೋಗ್ಯ ತಜ್ಞರಂತೆ, ಸರ್ಕಾರಿ ಪ್ರಾಯೋಜಿತ ಆರೋಗ್ಯ ರಕ್ಷಣಾ ಯೋಜನೆ ಹೊಂದದವರು ಇಂದಿಗೂ ಖಾಸಗಿ ಆರೋಗ್ಯ ವಿಮೆಯನ್ನೇ ಅವಲಂಬಿಸಿದ್ದಾರೆ.

ಇಷ್ಟಲ್ಲದೆ, ಆರೋಗ್ಯ ರಕ್ಷಣೆಗೆ ಆರ್ಥಿಕ ರಕ್ಷಣೆಯನ್ನು ಸೂಚಿಸುವ ನಿರ್ಣಾಯಕವಾದ ದುರಂತ ಆರೋಗ್ಯ ವೆಚ್ಚ ಮತ್ತು ಆರೋಗ್ಯ ವೆಚ್ಚಗಳ ಕಾರಣದಿಂದಾಗಿ ಬಡತನಕ್ಕೆ ತಳ್ಳಲ್ಪಡುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಇಲ್ಲಿ ಎಂಬುದು ಒಂದು ಮನೆಯ ಕುಟುಂಬಸ್ಥರ ಆರೋಗ್ಯ ರಕ್ಷಣೆಯ ವೆಚ್ಚವು ಆರೋಗ್ಯ ರಕ್ಷಣೆಗಾಗಿ ಪಾವತಿಸುವ ಸಾಮರ್ಥ್ಯಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಮನೆಯ ಒಟ್ಟು ಖರ್ಚಿನ ಶೇಕಡ 10 ಕ್ಕಿಂತ ಹೆಚ್ಚಾದಾಗ ಸಂಭವಿಸುತ್ತದೆ . ಗೊತ್ತಿರಲಿ, ಆರೋಗ್ಯ ಸೇವೆಗಳ ಲಭ್ಯತೆಗೆ ಸಂಬಂಧಿಸಿದ ನಿಯತಾಂಕಗಳು ಬಹಳ ಮುಖ್ಯವಾಗಿದೆ.

ನಮ್ಮಲ್ಲಿ ಆರೋಗ್ಯ ಸಿಬ್ಬಂದಿಗಳ ಲಭ್ಯತೆ ಸೇರಿದಂತೆ 14 ಅಂತರರಾಷ್ಟ್ರೀಯವಾಗಿ ಅಂಗೀಕರಿಸಲ್ಪಟ್ಟ ನಿಯತಾಂಕಗಳಿವೆ.

ನಮ್ಮಲ್ಲಿ ಸರ್ಕಾರಿ ಆರೋಗ್ಯ ಸೌಲಭ್ಯ ಬಳಸಿದಿರಲು ಹಲವು ಕಾರಣಗಳಿವೆ. ಅಂತಹವುಗಳಲ್ಲಿ ಶೇಕಡ 48ರಷ್ಟು ಕಳಪೆ ಗುಣಮಟ್ಟದಿಂದ ಕೂಡಿದೆ. ಶೇಕಡ 40ರಷ್ಟು ಸಮೀಪದಲ್ಲಿರುವ ಗಳಲ್ಲಿ ಸೌಲಭ್ಯಗಳ ಕೊರತೆ ಇದೆ. ಒಟ್ಟಾರೆ, ಜಿಡಿಪಿಯ ಶೇಕಡವಾರು ಆರೋಗ್ಯ ವೆಚ್ಚವು 2013ರಲ್ಲಿ ಶೇಕಡ 1.3 ರಿಂದ 2022-23ರಲ್ಲಿ ಶೇಕಡಾ 2 .1 ರಷ್ಟಕ್ಕೆ ಏರಿದೆ.

2010ರ ವೇಳೆಗೆ ಒಟ್ಟು ದೇಶೀಯ ಉತ್ಪನ್ನದ ಶೇಕಡ 2ರಷ್ಟು ಗುರಿಯನ್ನು 2002ರ ರಾಷ್ಟ್ರೀಯ ಆರೋಗ್ಯನೀತಿಯೂ ಹೊಂದಿತ್ತು. 2004ರಲ್ಲಿ ಸಂಯುಕ್ತ ಪ್ರಗತಿಶೀಲ ಒಕ್ಕೂಟದ ಸರ್ಕಾರ ಇದ್ದಾಗ 5ವರ್ಷಗಳ ಆಡಳಿತಾವಧಿಯಲ್ಲಿ ಸಾರ್ವಜನಿಕ ಆರೋಗ್ಯ ವೆಚ್ಚವನ್ನು ಒಟ್ಟು ದೇಶೀಯ ಉತ್ಪನ್ನದ 2-3 ರಷ್ಟು ಹೆಚ್ಚಿಸುವ ಗುರಿ ಇತ್ತು.

12ನೇ ಪಂಚವಾರ್ಷಿಕ ಯೋಜನೆಯು 2017ರ ಮಾರ್ಚ್ ಹೊತ್ತಿಗೆ ಒಟ್ಟು ದೇಶೀಯ ಉತ್ಪನ್ನದ 1.87 ರಷ್ಟು ಗುರಿಯನ್ನು ಹೊಂದಿತ್ತು. 2017ರ ರಾಷ್ಟ್ರೀಯ ಆರೋಗ್ಯ ನೀತಿಯು 2025 ವೇಳೆಗೆ ಇಂತಹ ಗುರಿಯನ್ನು ಶೇಕಡ 2.5ರಷ್ಟಕ್ಕೆ ಹೆಚ್ಚಿಸಿತ್ತು.

ರಾಷ್ಟ್ರೀಯ ಆರೋಗ್ಯ ಖಾತೆಗಳ ದತ್ತಾಂಶದಂತೆ, ಆರೋಗ್ಯ ವೆಚ್ಚಕ್ಕಾಗಿ ಶೇಕಡ 58ರಷ್ಟು ಪಾಲನ್ನು ಭರಿಸುತ್ತಿದೆ. 15 ನೇ ಹಣಕಾಸು ಆಯೋಗದ ರಚನೆಯ ನಂತರ ಹೆಚ್ಚಿನ ಪ್ರಮಾಣದ ನಿಧಿಯು ರಾಜ್ಯಗಳಿಗೆ ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಆಗಿದೆ. ದುರಂತ ಎಂದರೆ, ಆರೋಗ್ಯ ಕ್ಷೇತ್ರಕ್ಕೆ ಶಿಫಾರಸ್ಸು ಮಾಡಲಾದ ಹಣದಲ್ಲಿ ಶೇಕಡ 8ಕ್ಕಿಂತ ಕಡಿಮೆ ಹಣವನ್ನು ಹಂಚಿಕೆ ಮಾಡಲಾಗುತ್ತಿದೆ.

ಸದ್ಯ ನಮ್ಮ ಕೇಂದ್ರ ಸರ್ಕಾರ ತನ್ನ ಉಆ ಯ ಸುಮಾರು 2 ಪ್ರತಿಶತವನ್ನು ಜನಾರೋಗ್ಯಕ್ಕಾಗಿ ವ್ಯಯಿಸುತ್ತಿದೆ. ಮೊದಲಿಗೆ ಇಂತಹ ವೆಚ್ಚವನ್ನು ಶೇಕಡ 6 ರಿಂದ 7 ರಷ್ಟಕ್ಕೆ ಹೆಚ್ಚಿಸಬೇಕಿದೆ . ಆರೋಗ್ಯ ವೆಚ್ಚ ಹೆಚ್ಚಿಸಿದಾಗ, ಆಸ್ಪತ್ರೆ, ವೈದ್ಯರು, ಔಷಧಿಗಳು ಮತ್ತು ಆರೋಗ್ಯ ಸೇವೆಗಳನ್ನು ಸುಧಾರಿಸುತ್ತದೆ.

ಇನ್ನಿಲ್ಲಿ ಜನರು ಅನಾರೋಗ್ಯಕ್ಕೆ ಒಳಗಾಗುವ ಮೊದಲೇ ಅವರನ್ನು ಆರೋಗ್ಯವಾಗಿಡಲು ಶ್ರಮಿಸಬೇಕಿದೆ. ಇದಕ್ಕಾಗಿ ನಿಯಮಿತ ತಪಾಸಣೆ, ಆರಂಭಿಕ ಹಂತದಲ್ಲೇ ರೋಗನಿರ್ಣಯಿಸಬೇಕು. ಸಕಾಲಿಕ ಚಿಕಿತ್ಸೆ ಯಿಂದ ಗಂಭೀರ ರೋಗಗಳನ್ನು ತಡೆಗಟ್ಟಬಹುದು. ಇದಲ್ಲದೆ, ಡಿಜಿಟಲ್ ಆರೋಗ್ಯ ಸೇವೆ ಬಳಸುವುದರಿಂದ ದೂರದ ಪ್ರದೇಶಗಳ ಜನರು ಚಿಕಿತ್ಸೆ ಪಡೆಯುವುದು ಸುಲಭವಾಗುತ್ತದೆ.

ಗೊತ್ತಿರಲಿ, ಇತ್ತೀಚಿನ ಸಮೀಕ್ಷೆಯು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿಲ್ಲದ ವೈದ್ಯಕೀಯ ಸೇವೆಗಳಿಗಾಗಿ ಪ್ರತಿ ಮನೆಗೆ 30 ದಿನಗಳಲ್ಲಿ ಸರಾಸರಿ ಜೇಬಿನಿಂದ ಖರ್ಚು ಮಾಡಲಾಗುತ್ತಿದೆ. ಇದು ಕ್ರಮವಾಗಿ 539 ರೂ. ಮತ್ತು 606 ರೂ. ಎಂದು ತೋರಿಸುತ್ತಿದೆ.

ಮತ್ತೊಂದೆಡೆ, ನಮ್ಮವರು 30 ದಿನಗಳಲ್ಲಿ ಇಂತಹ ಸೇವೆಗಳಿಗಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ 125 ಮತ್ತು 175 ರೂ.ಗಳಷ್ಟನ್ನು ಖರ್ಚು ಮಾಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆಸ್ಪತ್ರೆಗೆ ದಾಖಲಾಗುವವರ ವೈಯಕ್ತಿಕ ವೆಚ್ಚ 1,035 ರೂ.ಗಳಷ್ಟಾಗಿದೆ .ಇದರಲ್ಲಿ 950 ರೂ. ಅಥವಾ ಶೇ. 91.3 ರಷ್ಟು ಜೇಬಿನಿಂದ ವ್ಯಯಿಸಲಾಗಿದೆ ಎಂಬುದನ್ನು ಅಂಕಿಅಂಶಗಳು ತೋರಿಸುತ್ತವೆ. ನಗರ ಭಾಗಗಳಲ್ಲಿ, ಪ್ರತಿ ವ್ಯಕ್ತಿಗೆ ಆಸ್ಪತ್ರೆಗೆ ದಾಖಲಾಗುವ ವೆಚ್ಚ 1,879 ರೂ.ಗಳಾಗಿದೆ. ಇದರಲ್ಲಿ 1,146 ರೂ. ಅಥವಾ ಶೇ. 60.9 ರಷ್ಟು ಜೇಬಿನಿಂದ ವ್ಯಯಿಸಿರುವುದು ಗೊತ್ತಾಗಿದೆ.

ಕೇರಳದಲ್ಲಿ ಹುಟ್ಟಿದ ಮಗುವಿಗಿಂತ ದೇಶದ ಇತರೆಡೆ ಜನಿಸಿದ ಮಗು ಕಡಿಮೆ ಆರೋಗ್ಯ ಸುರಕ್ಷೆ ಹೊಂದಿದೆ ಎಂದು ಹೇಳುತ್ತಿಲ್ಲ.

ಆಸ್ಪತ್ರೆಯ ಗುಣಮಟ್ಟ, ಸಿಬ್ಬಂದಿಯ ಹೊಣೆಗಾರಿಕೆ, ವ್ಯವಸ್ಥೆಯ ವಿನ್ಯಾಸ ಎಲ್ಲಿಯವರೆಗೂ ಸುಧಾರಣೆ ಕಾಣುವುದಿಲ್ಲವೋ ಅಲ್ಲಿಯವರೆಗೂ ಬಜೆಟ್‌ನಲ್ಲಿ ಹಣ ಹಂಚಿಕೆ ಮಾಡಿದರೂ ಬಳಕೆ ಕಡಿಮೆ ಇದೆ.

ಇವೆಲ್ಲವನ್ನೂ ಕಂಡಾಗ ಸರ್ಕಾರ ತನ್ನ ಆಯವ್ಯಯದಲ್ಲಿ ಹಣ ಹೆಚ್ಚಿಸಿ ಮೀಸಲಿಟ್ಟರೆ ಸಾಲದು , ಆರೋಗ್ಯ ವ್ಯವಸ್ಥೆಯನ್ನು ಹೇಗೆ ವಿನ್ಯಾಸಗೊಳಿಸಬೇಕೆಂದು ಚಿಂತಿಸಿಸುವ ಅಗತ್ಯ ಇರುವುದನ್ನು ತೋರಿಸುತ್ತದೆ. ಅಂದರೆ ಆಯವ್ಯಯದಲ್ಲಿ ಹಂಚಿಕೆಯಾಗುವ ಹಣ ಆರೋಗ್ಯ ಕೇಂದ್ರಗಳಿಗೆ ತಲುಪಬೇಕು. ಅದರಲ್ಲೂ ಮುಖ್ಯವಾಗಿ ರೋಗಿಗೆ ತಲುಪುವಂತಾಗಬೇಕು .

ಇನ್ನೂ ವೈದ್ಯಕೀಯ ಶಿಕ್ಷಣದಲ್ಲಿಯೂ ತನ್ನ ಹೂಡಿಕೆಯನ್ನು ಸರ್ಕಾರ ಹೆಚ್ಚಿಸಿದೆ. 2014ರಿಂದ ಇಲ್ಲಿಯವರೆಗೂ 157 ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ.

ಇದರಲ್ಲಿ 108 ಕಾರ್ಯ ನಿರ್ವಹಿಸುತ್ತಿರುವುದನ್ನು 2024 ರಲ್ಲಿ ಸರ್ಕಾರ ಲೋಕಸಭೆಗೆ ತಿಳಿಸಿತ್ತು . 2026-27 ರ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣಕ್ಕಾಗಿ 1,877 ಕೋಟಿಗಳಷ್ಟು ಮೀಸಲಿಟ್ಟಿದೆ . ಸಹಾಯಕ ಆರೋಗ್ಯ ವೃತ್ತಿಪರರ ಸಂಸ್ಥೆಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದೆಂದು ಆಯವ್ಯಯ ಭಾಷಣದಲ್ಲಿ ಹೇಳಿದ್ದರು.

ಅಂದರೆ 5 ವರ್ಷಗಳಲ್ಲಿ 10ಸಾವಿರ ಗಳನ್ನು ಸ್ಥಾಪಿಸುವ ಗುರಿ ಇಟ್ಟುಕೊಂಡಿದ್ದಾರೆ. ಅಲ್ಲದೆ , 10 ವಿಭಾಗಗಳಲ್ಲಿ ಖಾಸಗಿ ಮತ್ತು ಸರ್ಕಾರಿ ವಲಯಗಳ ಹೊಸ ಸಂಸ್ಥೆಗಳನ್ನು ತೆರೆಯುವ ಉದ್ದೇಶವನ್ನು ಹೊಂದಿದ್ದಾರೆ .

ಇಷ್ಟಲ್ಲದೆ ಸರ್ಕಾರ 3 ಹೊಸ ರಾಷ್ಟ್ರೀಯ ಔಷಧ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳನ್ನು , 3 ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಮತ್ತು 1 ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸುವುದಾಗಿಯೂ ಹೇಳಿದ್ದರು .

ನೆನಪಿಡಿ, ಆರೋಗ್ಯವು ಖರ್ಚಲ್ಲ, ಬದಲಾಗಿ ದೇಶದ ಭವಿಷ್ಯಕ್ಕಾಗಿ ಹೂಡುವ ಹೂಡಿಕೆ . ಜನರು ಆರೋಗ್ಯವಾಗಿದ್ದರೆ ಮಾತ್ರ ನಮ್ಮ ದೇಶವು ಬಲಶಾಲಿ ಮಾತ್ರವಲ್ಲದೆ ಹೆಚ್ಚು ಸಮೃದ್ಧತೆಯಿಂದ ಕೂಡಿರುತ್ತದೆ.

ನಮ್ಮ ದೇಶ ಅಭಿವೃದ್ಧಿ ಹೊಂದಿದ ದೇಶವಾಗಲು ಬಯಸಿದರೆ, ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡುವುದು ಬಹಳ ಮುಖ್ಯ. ಜನರ ಆರೋಗ್ಯ ಸುಧಾರಿಸಿದರೆ, ದೇಶವು ಸ್ವಯಂಚಾಲಿತವಾಗಿ ಪ್ರಗತಿ ಹೊಂದುತ್ತದೆ.

ಇವೆಲ್ಲವನ್ನೂ ನಿಮ್ಮ ಮುಂದಿಡುವಾಗ, ನನಗೆ ವಿನ್ಸ್ಟನ್ ಚರ್ಚಿಲ್ ಹೇಳಿದ ಮಾತೊಂದು ನೆನಪಾಗುತ್ತಿದೆ. ಅದು ''ಭಾರತೀಯರು ಆಳಲು ಅರ್ಹರಲ್ಲ, ಅವರು ಅಳಲು ಅರ್ಹರು'' ಎಂದು ಹೇಳಿದ್ದ. 80 ವರ್ಷಗಳಲ್ಲಿ ನಾವಿದನ್ನು ಸುಳ್ಳು ಮಾಡಿದ್ದೇವೆಯೇ?

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR